# ನಾದನೂಪುರ ವಂಡಾರು
# Nadanoopura Vandaru



ಚೆಲುವು ನೋಡಮ್ಮ ಚೆಲುವು
ಯಕ್ಷಗಾನ ವೇಷಭೂಷಣದ ಸೊಬಗು


ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/


ಪರಿವಿಡಿ


ಬೋರ್ಡ್ ರೂಮ್
ಸಂಪಾದಕೀಯ
ಯಕ್ಷಗಾನದಲ್ಲಿ ಆಹಾರ್ಯದ ಪ್ರಾಮುಖ್ಯತೆ
ಮೇಳದರ್ಪಣ-ಸಂಚಿಕೆ-06 – ಕರ್ನಾಟಕ ಮೇಳದ ಇತಿಹಾಸ
ಪ್ರಯೋಗಶೀಲತೆಯ ಹರಿಕಾರ – ಸುಬ್ರಹ್ಮಣ್ಯ ಧಾರೇಶ್ವರ
ಧೀರ ಕಲೆಯೊಳಗೆ ಕೀರವಾಣಿಯರು-20 ಶ್ರೀಮತಿ ಆರತಿ ಪಟ್ರಮೆ
ಸಾಲಿಗ್ರಾಮದಲ್ಲಿ ಶಿರೂರು ಫಣಿಯಪ್ಪಯ್ಯ ಸಂಸ್ಮರಣೆ
ಯಕ್ಷ ಕೃತಿ ಪರಿಚಯ ಮಾಲಿಕೆ





## ಬೋರ್ಡ್ ರೂಂ

**ಆತ್ಮೀಯರೆ,**

ನಾದನೂಪುರ ಡಿಜಿಟಲ್ ಯಕ್ಷ ಪತ್ರಿಕೆಯ ಎಲ್ಲ ಓದುಗರಿಗೆ, ಕಲಾಬಂಧುಗಳಿಗೆ, ಲೇಖಕರಿಗೆ, ವಿಮರ್ಶಕರಿಗೆ, ಅಭಿಮಾನಿಗಳಿಗೆ ನೂತನ ಕ್ಯಾಲೆಂಡರ್ ವರ್ಷದ ಹಾರ್ದಿಕ ಶುಭಾಶಯಗಳು. ಹೊಸ ವರ್ಷ ಹೊಸ ಸಾಧನೆಗಳಿಗೆ ಹೊಸ ವಿಜಯಗಳಿಗೆ ಹೊಸ ಹುಮ್ಮಸ್ಸು ನೀಡಲಿ ಎಂಬ ಆಶಯದೊಂದಿಗೆ 2024 ರ ಮೊದಲ ಸಂಚಿಕೆಯನ್ನು ನಿಮ್ಮ ಕೈಗಿಡುತ್ತಿದ್ದೇವೆ. ಕಾಲ ಹೇಗೆ ಬದಲಾಗುತ್ತದೋ ಹಾಗೆಯೇ ಎಲ್ಲಾ ವಿಚಾರ ವಿಷಯಗಳಲ್ಲಿ ಪರಿವರ್ತನೆ ನಿರಂತರ ನಡೆಯುತ್ತಲೇ ಇರುತ್ತದೆ. ಯಕ್ಷಗಾನದಲ್ಲೂ ಅಷ್ಟೆ, ಇಂದಿಗೂ, ಕಳೆದ ಕೆಲ ದಶಕಗಳ ಹಿಂದಿಗೂ ಹೋಲಿಸಿದ್ರೆ ಸಾಕಷ್ಟು ಬದಲಾವಣೆಗಳಾಗಿವೆ. ಮೇಳದ ಚೌಕಿಯ ವ್ಯವಸ್ಥೆಯಲ್ಲೂ..

ಇಂದಿನ ಬರಹದಲ್ಲಿ ಮೇಳದಿಂದ ಕಲಾವಿದನಿಗೆ ಕೊಡುವ ವೇಷ ಭೂಷಣಗಳ ಪೆಟ್ಟಿಗೆ ಮತ್ತು ಅದರಲ್ಲಿರೋ ವಸ್ತುಗಳ ಬಗ್ಗೆ ಕೆಲವು ಮಾಹಿತಿಗಳನ್ನು ಹಂಚಿಕೊಳ್ತೇನೆ. ನೀವೆಲ್ಲ ಗಮನಿಸಿರಬಹುದು, ಚೌಕಿಯಲ್ಲಿ ಪ್ರತಿಯೊಬ್ಬ ಕಲಾವಿದನ ಸ್ಥಾನಕ್ಕೆ ತಕ್ಕಂತೆ ಒಂದೊಂದು ನಂಬರಿನ ಪೆಟ್ಟಿಗೆಯನ್ನೂ ನೀಡಿರುತ್ತಾರೆ. ತಿರುಗಾಟದ ಮೇಳದ ವ್ಯವಸ್ಥೆಯಲ್ಲಿ ಎಲ್ಲ ಕಲಾವಿದರಿಗೂ ಒಂದೊಂದು ಪೆಟ್ಟಿಗೆ ಖಾಯಂ ಆಗಿರುತ್ತದೆ. ಇದರಲ್ಲಿ ವೇಷಧಾರಿ ತನ್ನ ವೇಷದ ಸಾಮಗ್ರಿಗಳನ್ನು ಇಟ್ಟುಕೊಂಡಿರುತ್ತಾನೆ. ಹಿಂದಿನ ಕಾಲದಲ್ಲಿ ಪ್ರಸಂಗಕ್ಕೆ ಬೇಕಾದ ವೇಷಭೂಷಣಗಳ ಸೆಟ್ ಮೇಳದಲ್ಲಿಯೇ ಇರುತ್ತಿತ್ತು. ಮೇಳದ ಪೆಟ್ಟಿಗೆಯಲ್ಲಿ ಒಂದು ಪಾತ್ರಕ್ಕೆ ಬೇಕಾಗುವ ಅಗತ್ಯ ವೇಷಭೂಷಣಗಳನ್ನು ಒದಗಿಸಿ ಕೊಡಬೇಕಾದ್ದು ಮೇಳದ ಜವಾಬ್ದಾರಿ. ಸಾಮಾನ್ಯವಾಗಿ ಹಿಂದೆಲ್ಲ ಮೇಳ ಕೊಟ್ಟಿರುವ ವೇಷದ ಪರಿಕರಗಳನ್ನೆ ಕಲಾವಿದರು ಬಳಸ್ತಾ ಇದ್ರು. ಈಗ ಹಾಗಲ್ಲ, ಡೇರೆ ಮೇಳ ಬಯಲಾಟದ ಮೇಳಗಳಲ್ಲಿ ಹೆಚ್ಚಿನ ಕಲಾವಿದರು ವೈಯುಕ್ತಿಕವಾಗಿ ವೇಷ ಭೂಷಣದ ಸೆಟ್ ಹೊಂದಿರುತ್ತಾರೆ. ಈಗೀಗ ಹೆಚ್ಚಿನ ಕಲಾವಿದರು ವೇಷದ ಚೆಂದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡ್ತಾರೆ. ಮೇಳದ ವೇಷಭೂಷಣಗಳು ಅಳತೆಗೆ ತಕ್ಕಂತೆ ಇರಲಾರದು, ಬೇಕಾದ ಹೊಸ ವೇಷಭೂಷಣಗಳ ಲಭ್ಯತೆ ಇಲ್ಲದೇ ಹೋದಾಗಲೂ ವೈಯುಕ್ತಿಕವಾಗಿ ಮಾಡಿಕೊಳ್ಳೋದು ಅನಿವಾರ್ಯವಾಗುತ್ತದೆ. ಸುಮಾರು 40 ವರ್ಷಗಳ ಹಿಂದೆ ಹಿರಿಯರಿಂದ ಕೇಳಿರುವ ಹಾಗೆ ಪುರುಷ ವೇಷಕ್ಕೆ ಕೇದಗೆ ಮುಂದಲೆ ಕಿರೀಟ ಕಟ್ಟುವುದಕ್ಕೆ ಬಾಳೆಗಿಡದ ಪಟ್ಟೆಯನ್ನು ಬಳಸುತ್ತಿದ್ದರಂತೆ. ಹಿಂಭಾಗದ ಮುಡಿಯನ್ನು ಹಿಂಗಾರ ಹೂವಿನಿಂದ ಶೃಂಗರಿಸಿಕೊಳ್ಳುತ್ತಿದ್ದರು. ಕಾಲಕ್ರಮೇಣ ಕಪ್ಪು ಬಟ್ಟೆ ಹಾಕಿ ಅಟ್ಟೆ ಕಟ್ಟಿ ಗೋಟು (ಕೇದಗೆ ಕಿರೀಟ) ಹಾಕಿಕೊಳ್ಳುತ್ತಿದ್ದರು. ಈಗಿನ ದಿನಗಳಲ್ಲಿ ಕೇದಗೆ ಕಿರೀಟದ ಬೆಂಡ್ ಸಿದ್ಧವಾಗಿಯೇ ಸಿಗುತ್ತದೆ. ಅದನ್ನು ಹಾಗೇ ಸುಲಭವಾಗಿ ಸಿಕ್ಕಿಸಿಕೊಳ್ಳಬಹುದು.



ಗೋವಿಂದ ವಂಡಾರು

ಈಗಿನ ಕಲಾವಿದರಲ್ಲಿ ಹಳೆಯ ಸಾಂಪ್ರದಾಯಿಕ ಭುಜಕಟ್ಟು, ಎದೆ ಹಾರ, ಕರ್ಣಪತ್ರ, ಸೊಂಟದ ಪಟ್ಟಿ ಮೊದಲಾದ ಪರಿಕರಗಳು ಕಣ್ಮರೆಯಾಗಿವೆ. ಹಿಂದಿನ ಮುಳ್ಳಿನ ಭುಜಕಟ್ಟು ಇಂದು ತುದಿ ತುಂಡರಿಸಿದ ಹೊಳೆಯುವ ಬೆಗಡೆಯಿಂದ ಅಲಂಕಾರಗೊಂಡ ಭುಜಕಟ್ಟಾಗಿ ಪರಿವರ್ತನೆಯಾಗಿದೆ.

ಸ್ತ್ರೀ ವೇಷಕ್ಕೆ ಶಿರೋಭೂಷಣದ ಹಿಂದೆ ಬಳಕೆ ಇರಲಿಲ್ಲ ಎಂಬುದಾಗಿ ಹಿರಿಯರು ಹೇಳುತ್ತಾರೆ. ಕಳೆದ ಕೆಲವು ದಶಕಗಳಿಂದ ಸ್ತ್ರೀ ವೇಷಧಾರಿಗಳೂ ಪುರುಷ ವೇಷದ ಗೋಟಿನಂತೆ ಚಿಕ್ಕದಾದ ಗೋಟು ಧರಿಸಿ ಶಿರೋಭೂಷಣ ಮಾಡಿಕೊಳ್ಳುತ್ತಾರೆ. ಸ್ತ್ರೀವೇಷದ ಕಿರೀಟದ ರಟ್ಟಿನ ಗೋಟು ಇತ್ತೀಚಿಗೆ ತಗಡಿಗೆ ಬದಲಾವಣೆಯಾಗಿದೆ. ಶಿರೋಭೂಷಣವನ್ನು ಫಳ ಫಳ ಮಿಂಚುವ ಲೇಸು, ಝರಿ ಮಣಿಗಳಿಂದ ಶೃಂಗರಿಸಿಕೊಳ್ಳುತ್ತಾರೆ. ಇತ್ತೀಚಿಗೆ ಮೇಕಪ್ ಆಧುನಿಕ ಸೆಟ್ ಗಳು ಸ್ತ್ರೀ ವೇಷದವರ ಪೆಟ್ಟಿಗೆಯಲ್ಲಿ ಸೇರಿಕೊಂಡಿವೆ. ಕಲಾವಿದರೇ ತಮ್ಮ ವೇಷಭೂಷಣಗಳನ್ನು ಅವರ ಆಸಕ್ತಿಗೆ ತಕ್ಕಂತೆ ಸಿದ್ಧ ಮಾಡಿಕೊಳ್ಳುವುದರಿಂದ ಅಗತ್ಯವಿರುವ ಪರಿಕರಗಳನ್ನು ಮಾತ್ರ ಮೇಳದಿಂದ ಪಡೆದುಕೊಳ್ಳುತ್ತಾರೆ. ಅದರಲ್ಲಿ ಕಸೆಸೀರೆ, ಕಾಲಿನ ಹಿಜರು (ಕಪ್ಪು ಪ್ಯಾಂಟು) ವೇಷದ ಒಳಗೆ ಹಾಕುವ ಬಟ್ಟೆಗಳು, ದಗಲೆ ಅಂಗಿ, ಕಿರೀಟದ ಹಿಂದೆ ಹಾಕುವ ಬಟ್ಟೆ, ಪಾಕ್ ಸೀರೆ (ವೇಲು) ಸ್ತ್ರೀ ವೇಷಕ್ಕೆ ಲಂಗ, ಕೆಲವು ಮೇಳದ ಸೀರೆಗಳು ರವಕೆಗೆ ಬಟ್ಟೆ ಇದನ್ನು ಮೇಳದಲ್ಲಿ ಒದಗಿಸುತ್ತಾರೆ. ದೇವಿ ಮಹಾತ್ಮೆ ಹಾಗೂ ಕೆಲವು ಪೌರಾಣಿಕ ಪ್ರಸಂಗಗಳಿಗೆ ವಿಶಿಷ್ಟ ವೇಷಭೂಷಣಗಳೂ ಇರುತ್ತವೆ. ದೇವಿ ಪಾತ್ರಧಾರಿಗೆ ನೆರಿ ಸೀರೆ, ಬೆಳ್ಳಿಯ ಕಿರೀಟ, ಮೇಳದಲ್ಲೇ ಇರುತ್ತದೆ. ಮುಖವರ್ಣಿಕೆಯ ಬಣ್ಣ, ಗೆಜ್ಜೆ, ಬಣ್ಣ ಒರೆಸುವ ಬಟ್ಟೆಗಳು, ಕೂದಲ ಉದುರಿ, ಅಲಂಕಾರದ ಹೂವುಗಳು ಇನ್ನಿತರ ದಿನನಿತ್ಯದ ಪ್ರದರ್ಶನಕ್ಕೆ ಬೇಕಾದ ವಸ್ತುಗಳು ಈ ಪೆಟ್ಟಿಗೆಯಲ್ಲಿರುತ್ತವೆ. ಒಂದು ಪ್ರದರ್ಶನ ಮುಗಿದ ಮೇಲೆ ವಸ್ತುಗಳು ಮತ್ತೆ ಪೆಟ್ಟಿಗೆ ಸೇರುತ್ತದೆ. ಮೇಳದ ವಾಹನ ಕಲಾವಿದರ ಈ ಪೆಟ್ಟಿಗೆಗಳನ್ನು ತುಂಬಿಕೊಂಡು ಇನ್ನೊಂದು ಊರಿನ ಪ್ರದರ್ಶನಕ್ಕೆ ತೆರಳುತ್ತದೆ.

ಇಂದಿನ ಚೌಕಿಯ ಒಂದು ಚಿತ್ರಣವನ್ನು ಇಲ್ಲಿ ನಿಮ್ಮ ಮುಂದಿಟ್ಟಿದ್ದೇನೆ. ಬದಲಾವಣೆ ನಿರಂತರ. ಹಿತ ಮಿತವಾದ ಬದಲಾವಣೆಗಳಿಗೆ ಹೊಂದಿಕೊಳ್ಳುತ್ತಾ ಬದುಕು ಸ್ವೀಕರಿಸೋಣ ಎಂಬ ಮಾತಿನೊಂದಿಗೆ ಇಲ್ಲಿಗೆ ನಿಲ್ಲಿಸುತ್ತೇನೆ. ***ನಿಮ್ಮವನೆ, ಗೋವಿಂದ ವಂಡಾರು***

## ಸಂಪಾದಕೀಯ

***ಆತ್ಮೀಯ ಓದುಗರೆ,***

ಎಲ್ಲ ಕಲೆಗಳೂ ಮೂಲದಲ್ಲಿ ಜನಪದ ಕಲೆಗಳೇ ಅನ್ನೋದು ವಿದ್ವಾಂಸರ ಅಭಿಪ್ರಾಯ. ಕಲೆ ವರ್ಧಿಸ್ತಾ ಶಿಷ್ಟತೆಯನ್ನು ಮೈಗೂಡಿಸಿಕೊಳ್ಳುತ್ತೆ. ಹಾಗೆಯೇ ಯಕ್ಷಗಾನವೂ. ಯಕ್ಷಗಾನ ಶಿಷ್ಟ ಕಲೆಯ ವ್ಯಾಪ್ತಿಗೆ ಬೆಳೆಯುತ್ತಿದ್ರೂ ಜನಪದ ಲಕ್ಷಣಗಳನ್ನು ಉಳಿಸಿಕೊಂಡಿದೆ. ಇನ್ನೂ ಹಳೆಯ ಸಂಪ್ರದಾಯವನ್ನು ಪ್ರೀತಿಸೋ ಜನರಿಂದಾಗಿ ಬಯಲಾಟದ ರಂಗಸ್ಥಳಗಳು, ವೇಷಭೂಷಣಗಳು, ಹಿಂದಿನ ನಡೆಗಳು ಇಂದಿಗೂ ಜೀವಂತ. ಯಕ್ಷಗಾನದ ಇನ್ನೊಂದು ಅಂಗ ಸಂಭಾಷಣೆ. ಸಂಭಾಷಣೆ ಅಂದ್ರೆ ಪಾತ್ರಗಳ ನಡುವೆ ನಡೆಯೋ ವಾಚಿಕ ಕ್ರಿಯೆ. ಪಾತ್ರಗಳ ಸಂವಹನ. ಯಕ್ಷಗಾನದ ಮಾತುಗಾರಿಕೆಯನ್ನು ಆಶುಕಲೆ ಎಂದಿದ್ದಾರೆ. ಯಕ್ಷಗಾನದಲ್ಲಿ ಸಂಭಾಷಣೆ ಪ್ರಸಂಗದ ಪದ್ಯಗಳಿಗೆ ಅರ್ಥ ಹೇಳೋ ಕ್ರಿಯೆಯಾಗಿದೆ. ಇದರಲ್ಲಿ ಪ್ರಸಂಗ ಪದ್ಯಗಳೇ ಪ್ರಸಂಗ ಪಠ್ಯಗಳೆಂದು ಗುರುತಿಸಲಾಗುತ್ತೆ. ಹಿಮ್ಮೇಳದಲ್ಲಿ ಭಾಗವತರು ಸಂದರ್ಭಕ್ಕೆ ತಕ್ಕಂತೆ ಪದ್ಯಗಳನ್ನು ಹಾಡುತ್ತಿದ್ದರೆ ವೇಷಧಾರಿ ಆ ಪದ್ಯಕ್ಕೆ ಅಭಿನಯದ ಮೂಲಕ ಪದ್ಯಾರ್ಥವನ್ನು ಸೂಚಿಸುತ್ತಾನೆ ಹಾಗೂ ನಂತರ ಸಂಭಾಷಣೆಯಲ್ಲಿ ವಿವರವಾದ ಅರ್ಥಗಳನ್ನು ಹೇಳುತ್ತಾನೆ. ಇದರಲ್ಲಿ ಪಾತ್ರಗಳ ನಡುವೆ ನಡೆವ ಸಂವಹನ, ಸ್ವಗತ, ಕವಿ ಆಶಯದ ಪ್ರಕಟಣೆ, ಸಂಭಾಷಣಾ ರಹಿತ ಕ್ರಿಯೆಗಳು ಇವೆಲ್ಲ ಒಳಗೊಂಡಿದೆ. ಯಕ್ಷಗಾನದ ಹಾಡುಗಳೇ ಪ್ರಸಂಗ ಪಠ್ಯಗಳಾಗಿರೋವಾಗ ವೇಷಧಾರಿಯಾದವನು ಪದ್ಯದ ಅರ್ಥ ತಿಳಿದುಕೊಂಡಿದ್ದರೆ ಸಾಕಲ್ವಾ? ಅಷ್ಟರ ವಿವರ ಹೇಳಿದರೆ ಮುಗೀತು. ಆದರೆ ನಿಜಾರ್ಥದಲ್ಲಿ ವೇಷಧಾರಿಯ ಕೆಲಸ ಪದ್ಯದ ಅರ್ಥ ಹೇಳುವುದಷ್ಟೇ ಅಲ್ಲ. ಅಷ್ಟೇ ಆಗಿದ್ದರೆ ಅವನೊಬ್ಬ ಅನುವಾದಕ ಮಾತ್ರ ಆಗಿರುತ್ತಾನೆ. ಆ ಸಂದರ್ಭದ ವಿವರಣೆ, ಇಂಗಿತ, ಪಾತ್ರದ ಮನೋಭಾವ, ಸ್ವಭಾವ ಇವೆಲ್ಲವನ್ನೂ ಅರ್ಥೈಸಿಕೊಂಡು ಆ ಕಾಲಕ್ಕೆ ಮಾತಿನ ರೂಪ ನೀಡಬೇಕಾಗುತ್ತೆ. ಹೀಗೆ ಸಂದರ್ಭೋಚಿತ ಮಾತಿನ ಮೂಲಕ ಸನ್ನಿವೇಶವನ್ನು ಪರಿಣಾಮಕಾರಿಯನ್ನಾಗಿ ಮಾಡಬೇಕಾಗುತ್ತದೆ. ಅದಕ್ಕಾಗಿಯೇ ವೇಷಧಾರಿಯು ಅರ್ಥ ಹೇಳುವುದರ ಮಹತ್ವ ಹೆಚ್ಚಿರುವುದು. ಇದನ್ನೇ ಆಶು ಕಲೆ ಎಂದಿರೋದು. (ಹಾಗೆಂದು ಯಕ್ಷಗಾನವನ್ನು ತಾಳಮದ್ದಳೆಯಂತೆ ಸುದೀರ್ಘ ಅರ್ಥಗಾರಿಕೆಯನ್ನಾಗಿಸಬಾರದು ಎಂಬ ಔಚಿತ್ಯವೂ ಬೇಕು) ಹಿಂದಿನ ಕೆಲವು ಕಲಾವಿದರ ಅರ್ಥಗರ್ಭಿತ ಸಂಭಾಷಣೆಗಳೂ ಇಂದೂ ದಾಖಲಾಗಿ ಉಳಿದಿವೆ. ಇವತ್ತು ಯಕ್ಷಗಾನದಲ್ಲಿ ಉತ್ತಮ ವಾಕ್ಪಟುತ್ವ ತೋರೋ ಕಲಾವಿದರಿದ್ದಾರೆ. ಹೀಗೆ ಮಾತಿನ ಮಂಟಪ ಕಟ್ಟೋ ಕಲಾವಿದರ ಮುಖ್ಯ ಲಕ್ಷಣ ಏನಂದ್ರೆ ಪ್ರಸಂಗದ ಅಧ್ಯಯನ ಹಾಗೂ ಪಾತ್ರವನ್ನು ವಿವಿಧ ದೃಷ್ಟಿಕೋನದಲ್ಲಿ ವಿವೇಚಿಸಬಲ್ಲ ಚಿಂತನಶೀಲತೆ. ಆದರೆ ಬೆರಳೆಣಿಕೆಯ ಕಲಾವಿದರಲ್ಲಿ ಮಾತ್ರ ಅಂತಹ ನೈಪುಣ್ಯತೆಯನ್ನು ಕಾಣಬಹುದು. ಯಕ್ಷಗಾನದ ಅರ್ಥಗಾರಿಕೆಯ ಇನ್ನೊಂದು ಮುಖ್ಯ ಲಕ್ಷಣ ಅಂದ್ರೆ ಒಂದು ಪಾತ್ರದ ಪ್ರಸ್ತುತಿಯಲ್ಲಿ ಕಲಾವಿದನಿಂದ ಕಲಾವಿದನಿಗೆ ಭಿನ್ನವಾಗಿರೊದು. ಯಕ್ಷಗಾನದ ಈ ಜನಪದ ಲಕ್ಷಣ ಹೊಂದಿರೋ ಆಶುಕಲೆ ಎಲ್ಲಿಯೂ ದಾಖಲಾಗುವುದಿಲ್ಲ. ಆದರೆ ಪ್ರದರ್ಶನ ಸಂದರ್ಭದ ಜೀವಂತಿಕೆಗೆ ಇದು ತೀರಾ ಮುಖ್ಯ ಎಂದೆನಿಸುತ್ತದೆ. ಇತ್ತೀಚಿಗೆ ಫೇಸ್ ಬುಕ್ ಯುಟ್ಯೂಬ್ ಗಳಲ್ಲಿ ಕಲಾವಿದರ ಮಾತುಗಾರಿಕೆಗಳು ದಾಖಲಾಗುತ್ತಿವೆ. ಒಂದೇ ಪ್ರಸಂಗದ ಒಂದೇ ಸನ್ನಿವೇಶಗಳನ್ನು ಬೇರೆ ಬೇರೆ ಪಾತ್ರಧಾರಿಗಳು ನಿರ್ವಹಿಸಿದ ತುಣುಕು ಅಥವಾ ಒಂದೇ ಕಲಾವಿದ ಒಂದೇ ಪಾತ್ರವನ್ನು ಬೇರೆ ಬೇರೆ ಪ್ರದರ್ಶನಗಳಲ್ಲಿ ನಿರ್ವಹಿಸಿದ್ದನ್ನು ಗಮನಿಸಿದಾಗ ಆ ಸಂಭಾಷಣೆಗಳು ಕತ್ತರಿಸು–ಅಂಟಿಸು ಪ್ರಕ್ರಿಯೆಯಾಗಿರುತ್ತದೆ. ಒಂದು ಪ್ರದರ್ಶನದಿಂದ ಮತ್ತೊಂದು ಪ್ರದರ್ಶನಕ್ಕೆ ಭಿನ್ನತೆ ಇರೋದಿಲ್ಲ. ಹೊಸತನ ಇರುವುದಿಲ್ಲ. ಆ ಸನ್ನಿವೇಶವನ್ನು ಪ್ರಸ್ತುತ ಪಡಿಸುವಲ್ಲಿ ಕಲಾವಿದನ ಸ್ವಂತಿಕೆ ಇರುವುದಿಲ್ಲ. ಕಾಲ್ಪನಿಕ ಪ್ರಸಂಗಗಳಲ್ಲೂ ಧಾರಾವಾಹಿ ಸಿನಿಮಾದ ಡೈಲಾಗ್ ಗಳು, ಟ್ರೋಲ್ ಆಗಿರೋ ತುಣುಕುಗಳೇ ಕೆಲ ಕಲಾವಿದರ ಮಾತಿನ ಬಂಡವಾಳವಾಗಿರುತ್ತದೆ. ಮಾತುಗಾರಿಕೆಯ ಆಶುಕಲೆ ಸ್ವಂತಿಕೆಯಿಂದ ರಸವತ್ತಾಗಿದ್ದಾಗ ಮಾತ್ರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಅಲ್ಲದೇ ಹೋದರೆ ಯಕ್ಷಗಾನದಲ್ಲಿ ಮಾತುಗಾರಿಕೆ ಆಶುಕಲೆ ಎಂದು ಬೀಗೋದ್ರಲ್ಲಿ ಅರ್ಥವೇ ಇಲ್ಲ. ಅದು ಇನ್ನೊಂದು ಕಲಾವಿದರ ಅನುಕರಣೆ, ಬಾಯಿಪಾಠ ಪುನರಾವರ್ತನೆ ಅಷ್ಟೇ ಆಗಿರುತ್ತದೆ. ಹಿಂದಿನ ಕಲಾವಿದರ ಅನುಕರಣೆ ಆರಂಭಿಕ ಹಂತದಲ್ಲಿ ಉಚಿತವಾದರೂ ಬೆಳೆಯುತ್ತಾ ಹೋದಂತೆ ಸ್ವಂತಿಕೆಯನ್ನು ಬೆಳೆಸುವಲ್ಲಿ ಕಲಾವಿದರು ಶ್ರಮ ಹಾಕಬೇಕು. ಯಕ್ಷಗಾನ ಅರ್ಥಗಾರಿಯನ್ನು ನಿಜವಾಗಿಯೂ ಆಶುಕಲೆಯನ್ನಾಗಿ ಬೆಳೆಸಿಕೊಳ್ಳಬೇಕಾದ್ದು ಕಲಾವಿದನೊಬ್ಬನ ಸದ್ಯದ ಅಗತ್ಯತೆ. – ***ಶುಭಾಶಯ***

# ಚೆಲುವು ನೋಡಮ್ಮ ಚೆಲುವು - ಇದು ವೇಷ ಭೂಷಣದ ಸೊಬಗು–ಸಾಯಿಸುಮ ಎಂ ನಾವುಡ

"ಆಂಗಿಕಂ ಭುವನಂ ಯಸ್ಯ ವಾಚಿಕಂ ಸರ್ವ ವಾಙ್ಮಯಂ
ಆಹಾರ್ಯಂ ಚಂದ್ರತಾರಾದಿ ತಂ ನಮಃ ಸಾತ್ವಿಕಂ ಶಿವಂ"

ಎಂಬ ನಂದಿಕೇಶ್ವರನ 'ಅಭಿನಯ ದರ್ಪಣ'ದ ಶ್ಲೋಕ ನಮ್ಮ ಯಕ್ಷಗಾನ ವಿಚಾರಕ್ಕೂ ಬಹಳ ಸೊಗಸಾಗಿ ಹೊಂದಿಕೆಯಾಗುತ್ತದೆ. ಭರತನು ನಾಟ್ಯಶಾಸ್ತ್ರದಲ್ಲಿ ಹೇಳಿದ ನಾಲ್ಕು ಅಭಿನಯಾಂಗಗಳು ಶಾಸ್ತ್ರೀಯವೆನಿಸುವ ಭರತನಾಟ್ಯದಲ್ಲಿ ಮಾತ್ರವಲ್ಲದೇ ನಮ್ಮ ಯಕ್ಷಗಾನದಲ್ಲಿಯೂ ಇರುವಂತಹದ್ದು. ಯಕ್ಷಗಾನದಲ್ಲಿ ಸಾಹಿತ್ಯ, ನೃತ್ಯ, ಅಭಿನಯ, ಮಾತು, ಹಿಮ್ಮೇಳ ಮುಂತಾದವೆಲ್ಲ ಎಷ್ಟು ಮುಖ್ಯವೋ ಆಹಾರ್ಯಕ್ಕೂ ಅಷ್ಟೇ ಪ್ರಾಮುಖ್ಯತೆಯಿದೆ.

"ಆಹಾರ್ಯ" ಇದೇನಿದು? ಈ ಪದವೇ ಯಕ್ಷಗಾನಕ್ಕೆ ಹೊಸತೆನಿಸಬಹುದು. ನಾವು ಈ ಪದವನ್ನು ಪ್ರತ್ಯೇಕವಾಗಿ ಬಳಕೆ ಮಾಡದಿದ್ದರೂ ಈ ಪದದ ಅರ್ಥ ವ್ಯಾಪ್ತಿ ನಮ್ಮ ಯಕ್ಷಗಾನಕ್ಕೆ ಒಗ್ಗುತ್ತದೆ ಎನ್ನುವುದೂ ಸತ್ಯ. ಡಾ. ಮೋಹನ ಕುಂಟಾರು ಅವರು ತಮ್ಮ 'ಯಕ್ಷಗಾನ ಆಹಾರ್ಯ' ಅನ್ನುವ ಕೃತಿಯ 'ಕೇಳಿ' ಎಂಬ ಭಾಗದಲ್ಲಿ ಹೀಗೆ ಹೇಳಿದ್ದಾರೆ – "ಯಕ್ಷಗಾನದ ಪರಿಭಾಷೆಗಳಲ್ಲಿ ಆಹಾರ್ಯ ಎಂಬ ಪದ ಬಳಕೆ ಇಲ್ಲ. ಆದರೆ ಆಂಗಿಕ, ಆಹಾರ್ಯ, ಸಾತ್ವಿಕ, ವಾಚಿಕ ಇವು ನಾಲ್ಕು ಪ್ರಚಲಿತ ಅಭಿನಯಾಂಗಗಳನ್ನು ಯಕ್ಷಗಾನ ಅಧ್ಯಯನ ಮಾಡಿದವರು ಈಗಾಗಲೇ ಬರಹಗಳಲ್ಲಿ ಹೆಸರಿಸಿದ್ದಾರೆ. ಆಹಾರ್ಯ ಎಂದರೆ ಪಾತ್ರದ ಪ್ರಸಾದನ. ಅಂದರೆ ಬಣ್ಣಗಾರಿಕೆ ಮತ್ತು ವೇಷಭೂಷಣಗಳೇ ಯಕ್ಷಗಾನದ ಆಹಾರ್ಯದ ಪ್ರಮುಖಾಂಗಗಳು".

ಆಹಾರ್ಯ ಎನ್ನುವುದು ಅಭಿನಯಾಂಗಗಳಲ್ಲಿ ಯಾಕೆ ಸೇರಿಕೊಳ್ಳುತ್ತದೆ? ಅದಕ್ಕಷ್ಟು ಪ್ರಾಮುಖ್ಯತೆಯೇಕೆ? ಎಂಬ ಪ್ರಶ್ನೆಗಳು ನಮ್ಮ ಮನದಲ್ಲಿ ಮೂಡಬಹುದು? ಆಹಾರ್ಯವಿಲ್ಲದೇ ಕಣ್ಮನ ತಣಿಸುವ ಕಲೆಯನ್ನು ಊಹಿಸಿಕೊಳ್ಳಿ. ಕಷ್ಟವಾಗುತ್ತದೆ ತಾನೇ? ವಿಶೇಷವಾಗಿ ಯಕ್ಷಗಾನದಲ್ಲಿ ಆಹಾರ್ಯಕ್ಕೆ ಅದರದ್ದೇ ಆದ ಪ್ರಮುಖ ಸ್ಥಾನವಿದೆ. ಯಕ್ಷಗಾನದೊಳಗಿರುವ ಪ್ರಭೇದಗಳಲ್ಲಿ ಈ ಆಹಾರ್ಯದ ಕ್ರಮದಲ್ಲಿ ಅನೇಕ ಬದಲಾವಣೆಗಳೂ ಇವೆ ಎಂಬುದೂ ಸತ್ಯವೇ. ಮೂಡಲಪಾಯದ ಕ್ರಮ ಬೇರೆ, ಪಡುವಲಪಾಯದ ಕ್ರಮ ಬೇರೆ. ಅದಲ್ಲಿಯೂ ಮತ್ತೆ ಸಣ್ಣಾಟ, ದೊಡ್ಡಾಟ, ತೆಂಕುತಿಟ್ಟು, ಬಡಗುತಿಟ್ಟು, ತುಳುತಿಟ್ಟು ಎಂಬ ಪ್ರಭೇದದ ಪ್ರಕಾರಗಳಲ್ಲಿ ಆಹಾರ್ಯದಲ್ಲಿರುವ ಬದಲಾವಣೆಗಳನ್ನು, ಸಣ್ಣ ಸಣ್ಣ ವ್ಯತ್ಯಾಸಗಳನ್ನು ನಾವು ಗಮನಿಸಬಹುದಾಗಿದೆ.






ಚಿತ್ರ ಕೃಪೆ – rangasyaksharanga.blogspot.com

ಪಡುವಲಪಾಯದ ತಿಟ್ಟು ಪ್ರಭೇದಗಳನ್ನು ಗುರುತಿಸುವುದಕ್ಕೆ ಮುಖ್ಯವಾಗಿ ಸಾಧ್ಯವಾಗುವುದೇ ಆಹಾರ್ಯದಿಂದ. ಬಡಗು ತಿಟ್ಟಿನ ವೇಷಭೂಷಣಗಳು ಬೇರೆ, ತೆಂಕುತಿಟ್ಟಿನ ವೇಷಭೂಷಣಗಳು ಬೇರೆ. ತೆಂಕಿನ ಸಣ್ಣ ಬದಲಾವಣೆಗಳೊಂದಿಗೆ ತುಳುತಿಟ್ಟಿನ ವೇಷಭೂಷಣಗಳು ಇರುತ್ತವೆ. ಬಡಗಿನ ವೇಷಧಾರಣೆಯ ಶೈಲಿಗೂ ತೆಂಕಿನ ಶೈಲಿಗೂ ವ್ಯತ್ಯಾಸಗಳು ಇವೆ. ಬಡಗಿನಲ್ಲಿ ಇಜಾರು, ಅಂಡಿನ ಬಟ್ಟೆ, ಕಸೆ ಸೀರೆ, ಜಟ್ಟಿ/ದಟ್ಟಿ, ದಗಲೆ, ನೆರಿ, ಹೆಗಲುವಲ್ಲಿ, ಮುಡಿ ಬಟ್ಟೆ, ಪೇಟ ಬಟ್ಟೆ ಮುಂತಾದವುಗಳನ್ನು ಬಳಸಿದರೆ, ತೆಂಕಿನಲ್ಲಿ ಸಣ್ಣ ವ್ಯತ್ಯಾಸಗಳೊಂದಿಗೆ ಒಳ ಇಜಾರು, ಹೊರ ಇಜಾರು, ಅಂಡಿನ ಬಟ್ಟೆ, ದಗಲೆ, ಪುಂಡು ರವಿಕೆ, ಜಟ್ಟಿ, ಬಾಲ್ ಮುಂಡು, ಸೋಗೆವಲ್ಲಿ ಹೀಗೆ ಕ್ರಮವಿದೆ. ಹಾಸ್ಯ, ಸ್ತ್ರೀ ವೇಷಗಳ ವೇಷಭೂಷಣಗಳಲ್ಲಿ ಹೆಚ್ಚಿನ ಸಾಮ್ಯತೆಯಿದೆ. ರಾಜವೇಷ ಅಥವಾ ಕಿರೀಟ ವೇಷ, ಪುಂಡು ವೇಷ ಅಥವಾ ಪಕಡಿ ವೇಷ, ಬಣ್ಣದ ವೇಷ, ಸ್ತ್ರೀ ವೇಷ, ಹಾಸ್ಯ ವೇಷ, ನಾಟಕೀಯ ವೇಷಗಳು ಹೀಗೆ ಪ್ರತಿಯೊಂದು ವಿಭಾಗಕ್ಕೂ ಬೇರೆ ಬೇರೆಯೇ ವೇಷಭೂಷಣಗಳ ಕ್ರಮ. ಎರಡೂ ತಿಟ್ಟುಗಳಲ್ಲೂ ಕಿರೀಟದ ಕ್ರಮಗಳು ಬೇರೆ. ತೆಂಕಿನಲ್ಲಿ ತುರಾಯಿ, ಪಕಡಿ, ಕೋಲು ಕಿರೀಟ, ಕೇಶಾವರಿ ಕಿರೀಟ, ಹೆಣ್ಣು ಬಣ್ಣದ ಕುತ್ತರಿ, ಭೀಮನ ಮುಡಿ, ಕಿರಾತನ ಓರೆ ಪಕಡಿ, ಶಿವನ ಮುಡಿ, ಕೇಸರಿ, ಟೋಪನ್, ಜಡೆ, ಕಿರಣ, ಗಡ್ಡ, ಮೀಸೆ, ಕೆನ್ನೆ ಪೂ, ಕರ್ಣ ಪತ್ರ, ಓಲೆ, ಮುಂದಲೆಬೊಟ್ಟು, ಹನುಮಂತನ ಕಿರೀಟ ಮುಂತಾದವುಗಳಾದರೆ, ಬಡಗಿನಲ್ಲಿ ಅಟ್ಟೆ, ಕೇದಗೆ ಮುಂದಲೆ, ಕಿರೀಟ, ಮುಂಡಾಸು, ಬಣ್ಣದ ತಟ್ಟಿ, ಹೆಣ್ಣು ಬಣ್ಣದ ತಟ್ಟಿ, ಈಶ್ವರನ ಮುಡಿ, ಹನುಮಂತನ ಕಿರೀಟ, ಕಿರಣ, ಕಿರಾಥನ ಕೋರೆ ಮುಂಡಾಸು, ಮುಡಿ ಕೇದಗೆ, ಮುಂದಲೆ, ಕೇದಗೆ, ಕರ್ಣ ಪತ್ರ, ತಾವರೆ, ತುರಾಯಿ, ಚೆಂಡು, ಸುತ್ತು, ಸ್ತ್ರೀ ವೇಷದ ಮುಂದಲೆ, ಟೋಪನ್, ಜರಿ ಲಾಡಿಗಳು, ಜಡೆ ಮುಂತಾದವುಗಳು ಶಿರೋಭೂಷಣಗಳು. ಇನ್ನು ಅಂಗಾಭರಣಗಳ ರೂಪದಲ್ಲಿ ಸ್ವಲ್ಪ ವ್ಯತ್ಯಾಸಗಳಿದ್ದರೂ ಹೆಸರುಗಳಲ್ಲಿ ಸಾಧಾರಣ ಹೋಲಿಕೆಗಳಿವೆ. ಕೊರಳಡ್ಡಿಗೆ, ಎದೆಪದಕ, ಭುಜಕೀರ್ತಿ, ಕೈಕಟ್ಟು, ತೋಳ್ಕಟ್ಟು, ಡಾಬು, ವೀರಕಸೆ, ಗೆಜ್ಜೆ, ಕಾಲಕಡಗ ಮುಂತಾದವುಗಳು. ತೆಂಕಿನಲ್ಲಿ ಕಾಲುಜಂಗ್, ಕಾಲುಕಡಗ,



ಕಾಲ್‌ಚೆಂಡು, ಕಾಲ್ ಮುಳ್ಳು ಗೆಜ್ಜೆ ಮುಂತಾದ ಕಾಲಿನ ಆಭರಣಗಳಿತ್ತು. ಒಮ್ಮೆ ಇವೆಲ್ಲ ಇಲ್ಲವಾಗಿ ಈಗ ಮತ್ತೆ ಕಾಣಿಸಿಕೊಳ್ಳುವುದಕ್ಕಾರಂಭವಾಗಿವೆ. ಯಕ್ಷಗಾನ ರಾತ್ರಿಕಾಲದಲ್ಲಿಯೇ ಪ್ರದರ್ಶಿಸಲ್ಪಡುತ್ತಿದ್ದ ಕಾರಣ ಝಗಮಗಿಸುವ ವೇಷಭೂಷಣಗಳು ಅನಿವಾರ್ಯವಾಗಿತ್ತು. ಬಣ್ಣಗಾರಿಕೆಯೂ ಬಹಳ ಆಕರ್ಷಕ. ಪಾತ್ರವೈವಿಧ್ಯತೆಯನ್ನು ವೇಷಭೂಷಣಗಳು ಹೇಗೆ ಸಾರುತ್ತವೆಯೋ ಮುಖವರ್ಣಿಕೆಯೂ ಅದಕ್ಕೆ ಹೊರತಲ್ಲ. ಮುಖವರ್ಣಿಕೆಯ ಶೈಲಿಯಿಂದ ಯಾವ ಪಾತ್ರ ಎಂದು ಗುರುತಿಸುವಷ್ಟು ವಿವಿಧತೆ ಇಲ್ಲಿದೆ.

ಪ್ರೊ. ಅಮೃತ ಸೋಮೇಶ್ವರರ ಲೇಖನ ಸಂಚಯ "ಯಕ್ಷತರು"ವಿನಲ್ಲಿರುವ 'ಯಕ್ಷಗಾನ ಆಹಾರ್ಯ ಭಾಗ' ಎಂಬ ಲೇಖನದಲಲಿ ಅವರು ಹೀಗೆ ಹೇಳಿದ್ದಾರೆ – "ಬಣ್ಣಗಳಲ್ಲಿ ಪ್ರಖರವರ್ಣ, ಸೌಮ್ಯ ವರ್ಣ, ಮಬ್ಬು ಬಣ್ಣ ಇತ್ಯಾದಿ ಭೇದಗಳಿವೆ. ಬಣ್ಣಗಳ ಪ್ರಭಾವ, ಪರಿಣಾಮಗಳು ಸ್ವಯಂ ವೇದ್ಯ. ಒಂದೊಂದು ಬಣ್ಣಕ್ಕೂ ವಿಶಿಷ್ಟ ಗುಣಧರ್ಮಗಳನ್ನು ಹೇಳಲಾಗಿದೆ. ವಿವಿಧ ಬಣ್ಣಗಳ ಮೇಳನ ಸಮತೋಲನಗಳಿಂದ ಕಣ್ಣಿಗೆ ಹಿತಕಾರಕ ಹಾಗೂ ವಿಭ್ರಮಾತ್ಮಕ ರಸವಿಲಾಸವನ್ನು ಒದಗಿಸುವುದು ಸಾಧ್ಯ. ಸಂಗೀತದ ಅಪಶ್ರುತಿ, ಅವಲಯಗಳು, ಹೇಗೆ ಅಸುಖಕಾರಕವೋ ಹಾಗೆಯೇ ಬಣ್ಣಗಾರಿಕೆಯ ಅವಲಯ, ಅಸಂಗತತೆಗಳೂ ಅಹಿತಕಾರಕ". ಇಂಗ್ಲಿಕ, ಸಫೇತ, ಅರಸಿನ, ಪಚ್ಚೆ, ಎಣ್ಣೆಮಸಿ ಎಂಬ ಪಂಚವರ್ಣಗಳಿಗೆ ಇಲ್ಲಿ ಪ್ರಾಶಸ್ತ್ಯ. ಊರ್ಧ್ವ ನಾಮಗಳು ಮತ್ತು ಅಡ್ಡನಾಮಗಳು, ಮುದ್ರೆಗಳು, ಚಿಟ್ಟಿ, ಹಸಿಬಣ್ಣ, ಸ್ತ್ರೀ ವೇಷದ ನಾಮಗಳು ಬೇರೆ, ಹಾಸ್ಯ ಪಾತ್ರದ ಮುಖವರ್ಣಿಕೆ ಬೇರೆ ಹೀಗೆ ಪಾತ್ರಕ್ಕನುಗುಣವಾಗಿ ಮುಖವರ್ಣಿಕೆಯೂ ಬದಲಾಗುತ್ತದೆ. ಬಣ್ಣದಲ್ಲಿ ಹಾಕುವ ಪ್ರತಿಯೊಂದು ಗೆರೆಗಳಿಗೂ ಅದರದೇ ಆದ ಕ್ರಮಗಳಿವೆ ಎನ್ನುತ್ತಾರೆ ಅನುಭವೀ ಕಲಾವಿದರು. ಅಡ್ಡನಾಮ ಮತ್ತು ಉದ್ದನಾಮದ ಕ್ರಮ ಶೈವ ಮತ್ತು ವೈಷ್ಣವ ಮತಗಳ ಪ್ರಭಾವದಿಂದಲೇ ಬಂದಿರಬೇಕು ಎಂಬುವುದು ವಿದ್ವಾಂಸರ ಅಭಿಪ್ರಾಯ.

ಹೀಗೆ ಪಾತ್ರಗಳು ಸಾಮಾನ್ಯ ವ್ಯಕ್ತಿಗಳಿಗಿಂತ ಭಿನ್ನವಾಗಿ ರಂಗದಲ್ಲಿ ಕಾಣಿಸಿಕೊಳ್ಳಬೇಕಾದರೆ, ಕಲಾ ಮಾಧ್ಯಮದ ಮುಖೇನ ಸಹೃದಯ ಕಲಾರಸಿಕರನ್ನು ಮುಟ್ಟಬೇಕಾದರೆ ಆಹಾರ್ಯ ಬಹಳ ಮುಖ್ಯ ಎನ್ನುವುದನ್ನು ನಾವು ಅರ್ಥವಿಸಿಕೊಳ್ಳಬೇಕು. ಅದರ ಪ್ರಾಧಾನ್ಯತೆಯನ್ನು ಅರಿಯಬೇಕು. ಕಲಾವಿದನ ಶ್ರಮವೆಷ್ಟಿರುತ್ತದೆ ಪಾತ್ರವಾಗುವಲ್ಲಿ ಎಂಬುದನ್ನು ಅರ್ಥವಿಸಿಕೊಂಡಲ್ಲಿ ಕಲೆ, ಕಲಾವಿದನ ಬೆಳವಣಿಗೆ ಸಾಧ್ಯ.

## ಯಕ್ಷಗಾನಕ್ಕೆ ಹೊಸ ದಿಸೆ–ಭಾಷ್ಯ ಬರೆದ ಕರ್ನಾಟಕ ಮೇಳ –ಮೇಳ ದರ್ಪಣ ಸಂಚಿಕೆ–06

ಕರ್ನಾಟಕ ಮೇಳವು, ಒಂದು ಕಾಲದಲ್ಲಿ, ತೆಂಕುತಿಟ್ಟಿನಲ್ಲಿ ವಿಜೃಂಭಿಸಿದ ಯಕ್ಷಗಾನ ಮೇಳ. ಉತ್ತಮ ಆಡಳಿತ, ಕಲಾವಿದರಿಗೆ ಉತ್ತಮ ವ್ಯವಸ್ಥೆ, ಆಕರ್ಷಕ ಡೇರೆ ಹಾಗೂ ಬೆಳಕಿನ ವ್ಯವಸ್ಥೆ ಹಾಗೂ ಪ್ರೇಕ್ಷಕರಿಗೆ ಯಕ್ಷಗಾನ ವೀಕ್ಷಿಸಲು ಆರಾಮಾಸನ ಎಲ್ಲವನ್ನೂ ಒಳಗೊಂಡ ಸುಸಜ್ಜಿತ ಮೇಳವಾಗಿತ್ತು.



ಕಲ್ಲಾಡಿ ವಿಟ್ಟಲ ಶೆಟ್ಟರು

ತೆಂಕುತಿಟ್ಟಿನ ಪ್ರಥಮ ಡೇರೆ ಮೇಳವಾದ ಕುಂಡಾವು ಮೇಳದ ಸಂಸ್ಥಾಪಕರಾದ ಕಲ್ಲಾಡಿ ಕೊರಗ ಶೆಟ್ಟರ ಸುಪುತ್ರರಾದ ಕಲ್ಲಾಡಿ ವಿಟ್ಟಲ ಶೆಟ್ಟರು ಕರ್ನಾಟಕ ಮೇಳವನ್ನು ಸ್ಥಾಪಿಸಿದವರು. ತಮ್ಮ ತಂದೆಯವರಾದ ಕಲ್ಲಾಡಿ ಕೊರಗ ಶೆಟ್ಟರ ಪ್ರೋತ್ಸಾಹ ಹಾಗೂ ಪ್ರೇರಣೆಯೊಂದಿಗೆ 1955 ರಲ್ಲಿ ಕರ್ನಾಟಕ ಮೇಳವು ತಿರುಗಾಟಕ್ಕೆ ಸಜ್ಜುಗೊಂಡಿತು. ಕುಂಡಾವು ಮೇಳದಲ್ಲಿ ತಂದೆಯವರೊಂದಿಗೆ ಶ್ರಮಿಸಿದ ವಿಟ್ಟಲ ಶೆಟ್ಟರಿಗೆ ಮೇಳದ ವ್ಯವಸ್ಥಾಪಕತ್ವದ ಬಗ್ಗೆ ವಿಶೇಷವಾದ ಅನುಭವವಿತ್ತು. ಹಾಗಾಗಿ ಕರ್ನಾಟಕ ಮೇಳ ಸ್ಥಾಪಿಸಿದ ವಿಟ್ಟಲ ಶೆಟ್ಟರು ಯಕ್ಷಗಾನದಲ್ಲಿ ಹಲವಾರು ಸುಧಾರಣೆ, ಹಲವಾರು ಹೊಸತನದ ಅನ್ವೇಷಣೆ ಮಾಡಿ ಯಕ್ಷಗಾನದಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದರು. ಕಲಾವಿದರಿಗೆ ಉತ್ತಮ ವೇತನ, ಉತ್ತಮ ವ್ಯವಸ್ಥೆ ಮಾಡುವಲ್ಲಿ ಕರ್ನಾಟಕ ಮೇಳವು ಮುಂಚೂಣಿಯಲ್ಲಿತ್ತು. ಕಲ್ಲಾಡಿ ವಿಟ್ಟಲ ಶೆಟ್ಟರು ಕರ್ನಾಟಕ ಮೇಳದಲ್ಲಿ ಮಾಡಿದ ಪ್ರಥಮ ಸಾಧನೆಯೆಂದರೆ "ಸೀನ್ – ಸೀನರಿ ಯಕ್ಷಗಾನ". ಸಾಮಾನ್ಯವಾಗಿ ಯಕ್ಷಗಾನ ಮೇಳಗಳು ಒಂದು ದಿನ ಒಂದು ಊರಿನಲ್ಲಿ ಡೇರೆ ಕಟ್ಟಿ ಪ್ರದರ್ಶನ ನೀಡುತ್ತಾರೆ. ಮರುದಿನ ಬೇರೆ ಊರಿನಲ್ಲಿ ಇದೇ ರೀತಿಯ ಪ್ರದರ್ಶನ. ಆದರೆ, ವಿಟ್ಟಲ ಶೆಟ್ಟರು" ಸೀನ್ ಸೀನರಿ ಯಕ್ಷಗಾನ" ಎಂಬ ಪರಿಕಲ್ಪನೆಯಲ್ಲಿ ಮಂಗಳೂರಿನ ನೆಹರೂ ಮೈದಾನದಲ್ಲಿ ಗುಡಿಸಲು ರೀತಿಯ ಒಂದು ತಾತ್ಕಾಲಿಕ ಥಿಯೇಟರ್ ನಿರ್ಮಿಸಿದರು. ನೆಹರೂ ಮೈದಾನದಲ್ಲೇ ಆರೇಳು ತಿಂಗಳ ಕಾಲ ಬೇರೆ ಬೇರೆ ಯಕ್ಷಗಾನ ಪ್ರದರ್ಶನ ನೀಡುವ ಯೋಜನೆ ಹಾಕಿದರು. ಕೆಲವೊಂದು ಪ್ರಸಂಗಗಳು ನಿರಂತರವಾಗಿ ಹತ್ತು, ಹದಿನೈದು ದಿನಗಳ ಕಾಲ ಪ್ರದರ್ಶನ ನೀಡಿದ್ದೂ ಇದೆ. ಈ ಸೀನ್ ಸೀನರಿ ಯಕ್ಷಗಾನದಲ್ಲಿ, ಯಕ್ಷಗಾನ ಪ್ರಸಂಗದಲ್ಲಿ ಬರುವ ಸನ್ನಿವೇಶಗಳಿಗೆ ವಿನೂತನವಾದ ಸೆಟ್ಟಿಂಗ್ ಮಾಡಿದ್ದರು. ಕಾಡಿನ ದೃಶ್ಯ, ಅರಮನೆಯ ದೃಶ್ಯ, ಸ್ವರ್ಗಲೋಕ, ವೈಕುಂಠ ಲೋಕ ಮುಂತಾದ ಸೀನ್ ನಿರ್ಮಿಸಿ ಜನಮೆಚ್ಚುಗೆ ಗಳಿಸಿದರು. ಈ ಸೀನ್ ಸೀನರಿ ಯಕ್ಷಗಾನವು ಪ್ರೇಕ್ಷಕರನ್ನು ಅಪಾರವಾಗಿ ಆಕರ್ಷಿಸಿತ್ತು. ಮೈಸೂರು, ಮಡಿಕೇರಿ, ಕಾರವಾರ, ಹೊನ್ನಾವರ ಮುಂತಾದ ದೂರದ ಊರುಗಳಿಂದಲೂ ಪ್ರೇಕ್ಷಕರು ಯಕ್ಷಗಾನ ವೀಕ್ಷಿಸಲು ಬರುತ್ತಿದ್ದರು. ಭೂಕೈಲಾಸ, ಪಂಚವಟಿ, ಬ್ರಹ್ಮಕಪಾಲ, ಸತ್ಯ ಹರಿಶ್ಚಂದ್ರ, ನಳ ದಮಯಂತಿ, ಕೋಟಿಚೆನ್ನಯ, ತುಳುನಾಡ ಸಿರಿ ಮುಂತಾದ ಪ್ರಸಂಗಗಳು ಆ ಕಾಲದಲ್ಲಿ ಪ್ರದರ್ಶನಗೊಂಡು ದಾಖಲೆ ನಿರ್ಮಿಸಿತ್ತು. ವಿಟ್ಟಲ ಶೆಟ್ಟರು ಉತ್ತಮ ಕಲಾವಿದರ ಗಡಣವನ್ನೇ ಕರ್ನಾಟಕ ಮೇಳದಲ್ಲಿ ಆರಿಸಿಕೊಂಡಿದ್ದುದೂ ಸೀನ್ ಸೀನರಿ ಯಕ್ಷಗಾನ ಪ್ರದರ್ಶನ ಯಶಸ್ವಿಯಾಗಲು ಕಾರಣವಾಯಿತು. ತಾತ್ಕಾಲಿಕ ಡೇರೆ ನಿರ್ಮಿಸಿದ ಕಾರಣ, ಮಳೆಗಾಲದಲ್ಲೂ ಯಕ್ಷಗಾನ ಪ್ರದರ್ಶನ ಮುಂದುವರಿಯುತಿತ್ತು. ಸೀನ್ ಸೀನರಿ ಎಂಬ ಯಕ್ಷಗಾನ ಪ್ರಬೇಧವೊಂದು, ಗಲ್ಲಾ ಪೆಟ್ಟಿಗೆ ತಂಬಿಸಲು ವಿಟ್ಟಲ ಶೆಟ್ಟರಿಗೆ ಸಹಾಯವಾಯಿತು. ಹಲವಾರು ವರ್ಷಗಳ ತನಕ ಈ ವ್ಯವಸ್ಥೆ ಜನಮೆಚ್ಚುಗೆಗೆ ಪಾತ್ರವಾಗಿತ್ತು. ನಂತರದಲ್ಲಿ ವಿಟ್ಟಲ ಶೆಟ್ಟರು, ಮಾಮೂಲು ಡೇರೆ ಮೇಳದ ಯಕ್ಷಗಾನ ಪ್ರದರ್ಶನದತ್ತ ಹೊರಳಿದರು. ಮುಂದಿನ



ಎಂ.ಶಾಂತರಾಮ ಕುಡ್ವ

ಕಾಲಘಟ್ಟದಲ್ಲಿ, ತುಳುನಾಡಿನ ಕಾರ್ಣಿಕದ ದೈವಗಳ ಕಥೆಗಳನ್ನು ಹೊಂದಿರುವ ಯಕ್ಷಗಾನ ಪ್ರಸಂಗಗಳನ್ನು ವಿಟ್ಟಲ ಶೆಟ್ಟರು ತುಳು ಭಾಷೆಯಲ್ಲಿ ಪ್ರದರ್ಶಿಸಲು ಮನ ಮಾಡಿದರು. ಅಂದಿನ ಶ್ರೇಷ್ಠ ಯಕ್ಷಗಾನ ಕಲಾವಿದರಾದ ಶಂಕರನಾರಾಯಣ ಸಾಮಗರು, ನಾರಂಪಾಡಿ ಸುಬ್ಬಯ್ಯ ಶೆಟ್ಟರು, ರಾಮದಾಸ ಸಾಮಗರು, ಕ್ರಿಶ್ಚನ್ ಬಾಬು, ಮೂಡುಬಿದಿರೆ ಕೃಷ್ಣ ರಾವ್, ಮಂಕುಡೆ ಸಂಜೀವ ಶೆಟ್ಟಿ, ಬೆಟ್ಟಂಪಾಡಿ ಬಾಳಪ್ಪ ಶೆಟ್ಟಿ, ಗೋವಿಂದ ಭಟ್ ಮುಂತಾದವರು ಆ ಕಾಲದಲ್ಲಿ ಕರ್ಣಾಟಕ ಮೇಳದ ಕಲಾವಿದರಾಗಿದ್ದರು. ಕರ್ಣಾಟಕ ಮೇಳದವರು ಪ್ರದರ್ಶಿಸುತ್ತಿದ್ದ ಕೋಟಿ ಚೆನ್ನಯ, ತುಳುನಾಡ ಸಿರಿ, ಕಾಂತಬಾರೆ–ಬುದಬಾರೆ, ಕೋರ್ದಬ್ಬು ಬಾರಗ, ದೇವುಪೂಂಜ ಪ್ರತಾಪ ಮುಂತಾದ ಪ್ರಸಂಗಗಳು ಕರ್ಣಾಟಕ ಮೇಳದಲ್ಲಿ ಭರ್ಜರಿ ಜಯಭೇರಿ ಬಾರಿಸಿತು. ಕರ್ಣಾಟಕ ಮೇಳದ ತುಳು ಪ್ರಸಂಗಗಳ ಯಶಸ್ಸು ಕಂಡ ಇತರ ಮೇಳಗಳೂ ತುಳು ಯಕ್ಷಗಾನ ಪ್ರದರ್ಶನ ನೀಡಲು ಪ್ರಾರಂಭಿಸಿದವು. ಆದರೂ, ತುಳು ಪ್ರಸಂಗಗಳ ಪ್ರದರ್ಶನದಲ್ಲಿ ಕರ್ಣಾಟಕ ಮೇಳವೇ ಮೇಲುಗೈ ಸಾಧಿಸಿತ್ತು. ಸುಮಾರು 1975ರಲ್ಲಿ ಕರ್ಣಾಟಕ ಮೇಳವು ತುಳು ಕಾಲ್ಪನಿಕ ಪ್ರಸಂಗಗಳನ್ನು ಪ್ರದರ್ಶಿಸಲಾರಂಭಿಸಿತು.
ಈ ಕಾಲದಲ್ಲೇ ಕರ್ಣಾಟಕ ಮೇಳವು ಹೊಸ ಡೇರೆ ವ್ಯವಸ್ಥೆ ಮಾಡಿತು. ಆಕರ್ಷಕವಾದ ಸ್ಟೀಲಿನ ಅರ್ಧ ಚಂದ್ರಾಕೃತಿಯ ವೇದಿಕೆ, ಪ್ರಸಂಗ ಪ್ರಾರಂಭವಾಗುವಾಗ ಒಂದು ಪರದೆ ಬಲದಿಂದ ಎಡ ಭಾಗಕ್ಕೆ ಹೋಗುವಾಗ, ಕೂಡಲೇ, ಒಳಗಿನ ಇನ್ನೊಂದು ಪರದೆ ಕೆಳಗಿನಿಂದ ಮೇಲಕ್ಕೆ ಹೋಗುವ ಆಧುನಿಕ ಪರದೆ ವಿನ್ಯಾಸವು ಆಕರ್ಷಕವಾಗಿತ್ತು. ತುಳು ಪ್ರಸಂಗಗಳಾದ ಕಾರಣ, ಪಾತ್ರಗಳು ಸಾಂಪ್ರದಾಯಿಕ ಯಕ್ಷಗಾನ ವೇಷಭೂಷಣದ ಬದಲು, ತಲೆಗೆ ಮುಂಡಾಸು, ಕಚ್ಚೆ ಧರಿಸಿ ಶಲ್ಯವನ್ನು ಹೆಗಲಿಗೆ ಹಾಕಿ, ತುಳುನಾಡಿನ ಪರಂಪರೆಯ ಪೋಷಾಕು ಯಕ್ಷಗಾನ ಪ್ರಿಯರನ್ನು ಆಕರ್ಷಿಸಲು ಕರ್ಣಾಟಕ ಮೇಳವು ಸಫಲವಾಯಿತು. ಈ ಅವಧಿಯಲ್ಲಿ ಅನಂತರಾಮ ಬಂಗಾಡಿಯವರ ಹೆಚ್ಚಿನ ಎಲ್ಲಾ ತುಳು ಪ್ರಸಂಗಗಳು ಪ್ರದರ್ಶನ ನೀಡಿದ್ದು ಕರ್ಣಾಟಕ ಮೇಳವೇ ಎಂಬುದು ಉಲ್ಲೇಖನೀಯ. ಕಾಡಮಲ್ಲಿಗೆ, ಪಟ್ಟದ ಪದ್ಮಲೆ, ಕೌಡೂರ ಬೊಮ್ಮೆ, ಕಚ್ಚೂರ್ದ ಮಾಲ್ದಿ, ಗೋಣತಂಕರೆ, ಬೂಡುದ ಬೊಮ್ಮಯ್ಯೆ, ಮಗಲೆನ ಮದಿಪು, ಎಲ್ಲೂರ್ದ ಮಲ್ಲಿ ಮುಂತಾದ ಕಾಲ್ಪನಿಕ ತುಳು ಪ್ರಸಂಗಗಳು, ಜಾಲಕೊರತಿ, ಮಾಯಾ ಜುಮಾದಿ, ಬ್ರಹ್ಮಬಲಾಂಡಿ, ಪಟ್ಟದ ಪೆರುಮಳೆ, ಅಗೋಳಿ ಮಂಜಣ್ಣೆ, ಕಿನ್ನಿಬಾಲೆ ಪೂಮಾಣಿ ಮುಂತಾದ ಪಾಡ್ದನ ಆಧರಿತ ತುಳು ಪ್ರಸಂಗಗಳು ಕರ್ಣಾಟಕ ಮೇಳದಲ್ಲಿ ಅಪೂರ್ವ ಯಶಸ್ಸನ್ನು ಕಂಡಿತು. ಈ ಅವಧಿಯಲ್ಲಿ ಕರ್ಣಾಟಕ ಮೇಳವು ಯಕ್ಷರಂಗದ ಶ್ರೇಷ್ಠ ಕಲಾವಿದರನ್ನು ಒಳಗೊಂಡ ಸಂತುಲಿತ ತಂಡವಾಗಿತ್ತು. ಯಕ್ಷರಂಗದ ದಿಗ್ಗಜರಾದ ದಾಮೋದರ ಮಂಡೆಚ್ಚ, ನೆಡ್ಲೆ ನರಸಿಂಹ ಭಟ್, ರಾಮದಾಸ ಸಾಮಗ, ಬೋಳಾರ ನಾರಾಯಣ ಶೆಟ್ಟಿ, ಅಳಿಕೆ ರಾಮಯ್ಯ ರೈ, ಮಿಜಾರು ಅಣ್ಣಪ್ಪ, ಕೊಳ್ಯೂರು ರಾಮಚಂದ್ರ ರಾವ್, ಮೂಡುಬಿದಿರೆ ಮಾಧವ ಶೆಟ್ಟಿ, ಅರುವ ಕೊರಗಪ್ಪ ಶೆಟ್ಟಿ, ಪುಂಡರೀಕಾಕ್ಷ ಉಪಾಧ್ಯಾಯ, ಅಳಿಕೆ ಲಕ್ಷ್ಮಣ ಶೆಟ್ಟಿ, ಗುಂಪೆ ರಾಮಯ್ಯ ರೈ, ಪುಳಿಂಚ ರಾಮಯ್ಯ ಶೆಟ್ಟಿ, ಕೇದಿಗೆ ರತ್ನಾಕರ ರಾವ್, ಕೆ.ಎಚ್. ದಾಸಪ್ಪ ರೈ, ಬೆಳ್ಳಾರೆ ವಿಶ್ವನಾಥ ರೈ, ಬಾಯಾರು ರಘುನಾಥ ಶೆಟ್ಟಿ, ತೊಡಿಕಾನ ವಿಶ್ವನಾಥ ಗೌಡ, ದಯಾನಂದ ಜೆಪ್ಪು ಮುಂಡಾಜೆ ಬಾಲಕೃಷ್ಣ ಶೆಟ್ಟಿ ಮುಂತಾದ ಘಟಾನುಘಟಿಗಳ ಸಾಂಗತ್ಯದೊಂದಿಗೆ ಕರ್ಣಾಟಕ ಮೇಳವು ಪ್ರಸಿದ್ಧಿಯ ತುತ್ತ ತುದಿಯ ಶೃಂಗವನ್ನು ಏರಿತ್ತು. ಈ ಕಾಲದಲ್ಲಿ ಕರ್ಣಾಟಕ ಮೇಳದ" ಕೋಟಿ ಚೆನ್ನಯ "ಪ್ರಸಂಗದಲ್ಲಿ ಬೋಳಾರ ನಾರಾಯಣ ಶೆಟ್ಟರ ಕೋಟಿ ಹಾಗೂ ಮೂಡುಬಿದಿರೆ ಮಾಧವ ಶೆಟ್ಟರ ಚೆನ್ನಯ ಪಾತ್ರ, ರಾಮದಾಸ ಸಾಮಗರ ಮಲ್ಲಯ್ಯ ಬುದ್ಧಿವಂತ, ಅರುವದವರ ಚಂದುಗಿಡಿ, ಕೊಳ್ಯೂರರ ಕಿನ್ನಿದಾರು, ಮಿಜಾರರ ಪಯ್ಯಬೈದ್ಯ, ಅಳಿಕೆ ಲಕ್ಷ್ಮಣ ಶೆಟ್ಟರ ಪೆರುಮಳೆ ಬಲ್ಲಾಳ ಪಾತ್ರವು ಯಕ್ಷರಂಗದಲ್ಲಿ ಸಂಚಲನ ಮೂಡಿಸಿತ್ತು. ಬೋಳಾರರ ಆಕರ್ಷಕ ಕಂಠದ ಕೋಟಿಯ ಪಾತ್ರ, ಸಾಯುವ ಕಾಲಕ್ಕೆ ಬಲ್ಲಾಳರಲ್ಲಿ ಮಾತಾಡುವ ಶೈಲಿಯು ಮುಂಜಾವಿನ ಕಾಲದಲ್ಲಿ ಪ್ರೇಕ್ಷಕರು ಕಣ್ಣೀರು ಸುರಿಸಿ ಮನೆಗೆ ಹೋಗುವಲ್ಲಿ ಪರಕಾಯ ಪ್ರವೇಶ ಮಾಡುತ್ತಿದ್ದರು. ಬೋಳಾರರು ನೇರ ನುಡಿಯ, ಶುದ್ಧ ಚಾರಿತ್ಯದ ಕಲಾವಿದರಾಗಿದ್ದರು. ತುಳು ಪ್ರಸಂಗಗಳ ಪ್ರಸ್ತುತಿಯಲ್ಲಿ ಕರ್ಣಾಟಕ ಮೇಳವು ಅಗ್ರಗಣ್ಯವೆನಿಸಿತ್ತು. ಮಂದೆ ಇನ್ನಿತರ ಮೇಳಗಳೂ ತುಳು ಪ್ರಸಂಗಗಳನ್ನು ಪ್ರದರ್ಶಿಸಲಾರಂಭಿಸಿತು. ಕರ್ಣಾಟಕ ಮೇಳದ ತುಳು ಪ್ರಸಂಗಗಳ ಯಶಸ್ಸಿನಿಂದಾಗಿ, ಮುಂದಕ್ಕೆ ಹತ್ತಾರು ಹೊಸ ಮೇಳಗಳು, ತುಳು ಪ್ರಸಂಗಗಳ ಪ್ರದರ್ಶನಕ್ಕಾಗಿಯೇ ತಿರುಗಾಟ ಪ್ರಾರಂಭಿಸಿದವು.

ಮುಂದಿನ ಕಾಲಘಟ್ಟದಲ್ಲಿ ಸುಪ್ರಸಿದ್ಧ ಭಾಗವತರಾದ ದಿನೇಶ್ ಅಮ್ಮಣ್ಣಾಯರು, ಮೂಲತಃ ದಾಮೋದರ ಮಂಡೆಚ್ಚರೊಂದಿಗೆ ಮದ್ದಲೆ ಸಾಥಿಯಾಗಿದ್ದವರು, ಮಂಡೆಚ್ಚರ ಪ್ರೇರಣೆಯಿಂದ ಭಾಗವತರಾಗಿ ಕರ್ಣಾಟಕ ಮೇಳದಲ್ಲಿ ಕಾಣಿಸಿಕೊಂಡರು. ನಂತರದಲ್ಲಿ, ಬೊಟ್ಟಿಕೆರೆ ಪುರುಷೋತ್ತಮ ಪೂಂಜ, ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿ, ಸಂಜಯ ಕುಮಾರ್, ಕೊಳ್ತಿಗೆ ನಾರಾಯಣ ಗೌಡ, ಬಾಯಾರು ಮೋಹನ್, ಮಿಜಾರು ತಿಮ್ಮಪ್ಪ, ಬಡಗು ತಿಟ್ಟಿನ ಸುಪ್ರಸಿದ್ಧ ಕಲಾವಿದರಾದ ನಗರ ಜಗನ್ನಾಥ ಶೆಟ್ಟಿ, ಕರುಣಾಕರ ಶೆಟ್ಟಿ ಮುಂತಾದವರ ಸೇರ್ಪಡೆಯಾಯಿತು. ಅದೇ ಕಾಲದಲ್ಲಿ ಪುರುಷೋತ್ತಮ ಪೂಂಜರ "ಮಾನಿಷಾದ" ಪೌರಾಣಿಕ ಪ್ರಸಂಗವು ಅತ್ಯಂತ ಜನಪ್ರಿಯತೆ ಗಳಿಸಿತು. ಈ ಪ್ರಸಂಗದಿಂದಾಗಿ ಪೂಂಜರು "ಅಭಿನವ ವಾಲ್ಮೀಕಿ" ಎಂದು ಜನಪ್ರಿಯರಾದರು. ಅರುವದವರ ರೂಕ್ಷ, ಸಂಜಯ ಕುಮಾರ್ ರ ಸೈರಿಣಿ, ಮಿಜಾರರ ಗುರು, ಅಗಸ, ಪುಳಿಂಚರ ಶಿಷ್ಯ ಹಾಗೂ ಲವಣಾಸುರ, ಸಿದ್ದಕಟ್ಟೆ ವಿಶ್ವನಾಥ ಶೆಟ್ಟರ ಅತ್ಯಮೋಘವಾದ ವಾಲ್ಮೀಕಿ, ಅಳಿಕೆ ಲಕ್ಷ್ಮಣ ಶೆಟ್ಟರ ಶ್ರೀರಾಮ, ಗುಂಪೆಯವರ ಲಕ್ಷ್ಮಣ, ಕೊಳ್ತಿಗೆಯವರ ಶತ್ರುಘ್ನ ಮುಂತಾದ ಪಾತ್ರಗಳು ಹೊಸತನ ನೀಡುವಲ್ಲಿ ಸಫಲವಾಯಿತು. "ಮಾನಿಷಾದ" ಪ್ರಸಂಗ ಇಂದಿಗೂ ಪ್ರಸ್ತುತವಾಗಿದ್ದು, ಅಂದಿನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ. ಕಲ್ಲಾಡಿ ವಿಟ್ಟಲ ಶೆಟ್ಟರ ನಿಧನಾನಂತರ, ಅವರ ಸುಪುತ್ರ ಕಲ್ಲಾಡಿ ದೇವಿಪ್ರಸಾದ್ ಶೆಟ್ಟರು ಕರ್ಣಾಟಕ ಮೇಳ ಮುನ್ನಡೆಸಿದರು. ಸರಿ ಸುಮಾರು 2000ನೇ ಇಸವಿಯಲ್ಲಿ ಕರ್ಣಾಟಕ ಮೇಳವು ತನ್ನ ತಿರುಗಾಟ ನಿಲ್ಲಿಸಿ ನೇಪಥ್ಯಕ್ಕೆ ಸರಿಯಿತು. ತನ್ನ 45 ವರ್ಷಗಳ ತಿರುಗಾಟದಲ್ಲಿ ಕರ್ಣಾಟಕ ಮೇಳವು ಹಲವಾರು ವಿನೂತನ ಪ್ರಯೋಗಗಳನ್ನು ಯಕ್ಷರಂಗಕ್ಕೆ ತಂದು, ಯಕ್ಷರಂಗದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದುದನ್ನು ಮರೆಯುವ ಹಾಗೆಯೇ ಇಲ್ಲ. ಅಂದಿನ ಕಾಲದಲ್ಲಿ ಕರ್ಣಾಟಕ ಮೇಳದ ಪ್ರದರ್ಶನ ಆಡಿಸುವುದು ಹಾಗೂ ಆ ಮೇಳದ ಪ್ರದರ್ಶನ ವೀಕ್ಷಿಸುವುದು ಎಂದರೆ, ಪ್ರತಿಷ್ಠೆಯ ವಿಷಯವಾಗಿತ್ತು. ಕಂಟ್ರಾಕ್ಟುದಾರರು ಕರ್ಣಾಟಕ ಮೇಳದ ಪ್ರದರ್ಶನ ಪಡೆಯಲು ಮುಗಿ ಬೀಳುತ್ತಿದ್ದರು ಎಂಬುದು ಸತ್ಯದ ಮಾತು. ಕರ್ಣಾಟಕ ಮೇಳವು ಇಂದು ಇಲ್ಲದಿದ್ದರೂ, ಆ ಮೇಳದ ಯಕ್ಷಗಾನ ವೀಕ್ಷಿಸಿದ ಸಾವಿರಾರು ಪ್ರೇಕ್ಷಕರು ಇಂದಿಗೂ ಕರ್ಣಾಟಕ ಮೇಳದ ಇತಿಹಾಸವನ್ನು ಮೆಲುಕು ಹಾಕುತ್ತಿದ್ದಾರೆ.

***ಲೇಖಕರು– ಎಂ.ಶಾಂತರಾಮ ಕುಡ್ವ, ಮೂಡುಬಿದಿರೆ***


**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9482847978. ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು**

# ಯಕ್ಷಗಾನದ ಮೇರು ಭಾಗವತ – ಸುಮಧುರ ಕಂಠದ ಸುಬ್ರಹ್ಮಣ್ಯ ಧಾರೇಶ್ವರ




**ಸು**ಬ್ರಹ್ಮಣ್ಯ ಧಾರೇಶ್ವರರು ಬಡಗಿನ ಯಕ್ಷಾಭಿಮಾನಿಗಳ ಗಮನ ಸೆಳೆಯುವುದು ಯಾಕೆಂದರೆ ಸರಿ ಸುಮಾರು ಮೂವತ್ತಕ್ಕೂ ಅಧಿಕ ವರ್ಷಗಳ ಕಾಲ ಬಡಗಿನ ರಂಗಸ್ಥಳದಲ್ಲಿ ತನ್ನ ಸುಮಧುರ ಧ್ವನಿ ಹಾಗೂ ಪ್ರಯೋಗಶೀಲತೆಯ ವೈಶಿಷ್ಟ್ಯತೆಗಾಗಿ. ಪೆರ್ಡೂರು ಮೇಳ ಪ್ರಾರಂಭದಿಂದ ನಿರಂತರ ಇಪ್ಪತ್ತಾರು ವರ್ಷ ತನ್ನ ಅದ್ಭುತ ಶಾರೀರ ಮತ್ತು ಶರೀರದಿಂದ ಯಕ್ಷಗಾನ ಮತ್ತು ಹಿಂದುಸ್ಥಾನಿ ಸಂಗೀತಗಳ ಸಮನ್ವಯ ಭಾಗವತರೆಂದು ಖ್ಯಾತಿ ಪಡೆದು ಯಕ್ಷಗಾನಾಸಕ್ತರ ಹೃದಯದಲ್ಲಿ ಶಾಶ್ವತವಾಗಿ ನೆಲೆ ನಿಂತವರು. ಕಳೆದ ವರ್ಷದ ತಿರುಗಾಟದಿಂದ ವೃತ್ತಿ ರಂಗಭೂಮಿಗೆ ವಿದಾಯ ಹಾಡಿರುವ ಭಾಗವತರ ನಿರ್ಗಮನ ಅಭಿಮಾನಿಗಳಿಗೆ ನಿರಾಸೆ ತಂದರೂ ಆರೋಗ್ಯ ಮತ್ತಿತರ ಕಾರಣದಿಂದ ನಿವೃತ್ತಿ ಅನ್ನುವುದು ವ್ಯಕ್ತಿಯೊಬ್ಬರ ಜೀವನದಲ್ಲಿ ಅನಿವಾರ್ಯ ಅನ್ನುವುದು ಸರ್ವವಿದಿತ. ನಿವೃತ್ತಿಯ ನಂತರವೂ ದುಡಿದು ಮುಂದಿನ ಪೀಳಿಗೆಯವರಿಗೆ ಅವಕಾಶ ನೀಡಬಯಸದೆ ನಿರುದ್ಯೋಗ ಸಮಸ್ಯೆಗೆ ಪರೋಕ್ಷವಾಗಿ ಕಾರಣರಾಗುತ್ತಿರುವ ವಿದ್ಯಾವಂತರನೇಕರಿಗೆ ಇದೊಂದು ಪಾಠವೂ, ಆದರ್ಶವೂ, ಹೌದು. ಇನ್ನೂ ಕನಿಷ್ಠ ಹತ್ತು ವರ್ಷ ರಂಗದಲ್ಲಿ ದುಡಿಯಬಲ್ಲ ಶಾರೀರ ಶರೀರ ಅವರಿಗಿದೆ. ಜನರಿಗೆ ಬೇಕು ಬೇಕು ಅನ್ನುವಾಗಲೆ ಇತರ ಮೇರು ಕಲಾವಿದರಂತೆ ಧಾರೇಶ್ವರರೂ ಸಹ ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಂಡಿದ್ದಾರೆ.

ಪೆರ್ಡೂರು ಮೇಳದ ಪ್ರಾರಂಭದ ದಿನಗಳು ಧಾರೇಶ್ವರ, ದುರ್ಗಪ್ಪ ಗುಡಿಗಾರ್, ಗಜಾನನ ದೇವಾಡಿಗರ ಗಜಗಟ್ಟಿ ಹಿಮ್ಮೇಳದಲ್ಲಿ ನಗರ ಜಗನ್ನಾಥ ಶೆಟ್ಟರ ಸುಂದರ. ರಾವಣನಿಗೆ "ಮಾರನಾಸ್ತ್ರ ತಾಗಿ ಬಿಗುವೇರಿತಲ್ಲೊ ಜಾಣೆ" ಪದ್ಯವಿರಬಹುದು, ರಾಮಾಂಜನೇಯದಲ್ಲಿ ಕುಮಟಾ ಗೋವಿಂದ ನಾಯಕರ ಹನುಮಂತನಿಗೆ "ರಘೋತ್ತುಮ ರಾಮ" ಪ್ರವೇಶದ ಪದ್ಯವಿರಬಹುದು, ಮುರೂರು ವಿಷ್ಣು ಭಟ್ಟರ ಸೀತೆಗೆ ವ್ಯಂಗ್ಯಭರಿತವಾದ "ಏನಿದೇನು ಸಿಟ್ಟು ಮಹನೀಯ", ಗೋಡೆಯವರ ಬ್ರಹ್ಮನಿಗೆ "ಮದುವೆ ಬೇಡವೇನೆ?" ಪದ್ಯ ಇರಬಹುದು, ಕುಶಲವದಲ್ಲಿ ಮೋಹನದಾಸ ಶೆಣೈಯವರ ರಾಮನಿಗೆ "ಚೆಲುವರನು ನೋಡಿದರೆ" ಭಾವಪೂರ್ಣವಾದ ಪದ್ಯವಿರಲಿ ಆ ಕಾಲದ ಯುವಕಲಾವಿದರಾದ ಗೋಪಾಲಾಚಾರ್ಯರ ಅಭಿಮನ್ಯು, ರಾಮ ನಾಯರಿಯವರ ಸುಭದ್ರೆಗೆ "ಯಾತಕಿಂತು ಬುದ್ಧಿ ಬಂತು' ಕರುಣಾರಸದ ಪದ್ಯವಿರಲಿ, ಇಲ್ಲೆಲ್ಲ ತನ್ನ ಗುರು ನಾರಣಪ್ಪ ಉಪ್ಪೂರರನ್ನು ನೆನಪಿಸಿದರೆ, ಬಡಗಿನ ಇನ್ನೊಂದು ಶೈಲಿಯಾದ ಕುಂಜಾಲು ಶೈಲಿಯನ್ನು ಆ ಶೈಲಿಯ ಪ್ರಾತಿನಿಧಿಕರಾದ ಮರಿಯಪ್ಪ ಅಚಾರ್ಯರ ಶೈಲಿಯಲ್ಲಿ ಹಾಡಿ ಕಾಳಿಂಗ ನಾವಡರ ನಂತರ ಬಡಗಿನ ಕುಂಜಾಲು ಮತ್ತು ಮಾರ್ವಿ ಎರಡೂ ಶೈಲಿಯ ಪ್ರಾತಿನಿಧಿಕ ತಾನೆಂಬುದನ್ನು ತೋರಿಸಿಕೊಟ್ಟ ಏಕಮೇವ ಭಾಗವತರಿವರು. ಐರೋಡಿ ಗೋವಿಂದಪ್ಪನವರ ಸಭೆಯ ಅರ್ಜುನನಿಗೆ "ಹಂಸಕೇತನಾದಿಗಳೆಲ್ಲ ಕೇಳಿ" ಇರಬಹುದು, ಭೀಷ್ಮ ಪರ್ವದ "ಎಲವೊ ಬಾಲ ಬಾಲ ಭಾಷೆ" ಹಿಂದುಸ್ಥಾನಿ ರೂಪಕತಾಳದ ಪದ್ಯವಿರಲಿ ನಗರದವರ ಅರ್ಜುನನಿಗೆ "ಯಾದವೋತ್ತಮ ಲಾಲಿಸಿ ಕೇಳು" ಪದ್ಯವಿರಲಿ, ಇಲ್ಲೆಲ್ಲ ಕುಂಜಾಲು ಶೈಲಿಯ ಸಮರ್ಥ ಭಾಗವತ ತಾನೆಂದು ತೋರಿಸಿಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ. ಬಡಗುತಿಟ್ಟಿನ ಹಾಸ್ಯಗಾರ ಹಳ್ಳಾಡಿ ಜಯರಾಮ ಶೆಟ್ಟಿ, ಬಡಾಬಡಗುತಿಟ್ಟಿನ ರಮೇಶ ಭಂಡಾರಿಯವರನ್ನು ಸಮರ್ಥವಾಗಿ ರಂಗದಲ್ಲಿ ಬಳಸಿಕೊಂಡ ಕೀರ್ತಿಯೂ ಇವರಿಗೆ ಸಲ್ಲುತ್ತದೆ. ಹಳೆಯ ಪೌರಾಣಿಕ ಪ್ರಸಂಗಗಳಲ್ಲಿ ಯಕ್ಷಗಾನದಲ್ಲಿ ಪ್ರಚಲಿತವಿದ್ದ ಉಪ್ಪೂರ ಶೈಲಿಯನ್ನು ಹಾಗೂ ಕುಂಜಾಲು ಶೈಲಿಯನ್ನು ಬಳಸಿಕೊಳ್ಳುತಿದ್ದ ಅಪರೂಪದ ಭಾಗವತರಲ್ಲಿ ಇವರೊಬ್ಬರು. ಕುಂಜಾಲು ಶೈಲಿಯಲ್ಲಿ ಹಾಡಬಲ್ಲವರು ಉಪ್ಪೂರರ ಶೈಲಿಯಲ್ಲಿ ಸೋಲುತ್ತಾರೆ. ಉಪ್ಪೂರರ ಶೈಲಿಯಲ್ಲಿ ಹಾಡಬಲ್ಲವರು ಕುಂಜಾಲು ಶೈಲಿಯಲ್ಲಿ ಸೋಲುತ್ತಾರೆ. ಎರಡೂ ಶೈಲಿಯಲ್ಲಿ ತನ್ನ ಕಂಠವನ್ನು ಬಳಸುತಿದ್ದ ಕಾಳಿಂಗ ನಾವಡರ ನಂತರದ ಭಾಗವತರಿವರು ಎಂದರೆ ತಪ್ಪಾಗದು. ಕರ್ಣಾರ್ಜುನ, ಜಾಂಬವತಿ, ಮೀನಾಕ್ಷಿ, ರತಿ ಕಲ್ಯಾಣ ಕೃಷ್ಣಾರ್ಜುನ ಮುಂತಾದ ಪ್ರಸಂಗದಲ್ಲಿ ಕುಂಜಾಲು ಶೈಲಿಯನ್ನು ಬಳಸಿದರೆ, ರಾಮಾಂಜನೇಯ, ಲಂಕಾದಹನ ಪಟ್ಟಾಭಿಷೇಕ ಮುಂತಾದ ಪ್ರಸಂಗಗಳಲ್ಲಿ ಚಾಲ್ತಿಯಲ್ಲಿರುವ ಉಪ್ಪೂರ ಶೈಲಿಯನ್ನು ಬಳಸಿ ಎರಡೂ ಶೈಲಿಗೆ ಮರ್ಯಾದೆ ನೀಡಿದ ಮಹಾನುಭಾವ ಭಾಗವತರಿವರು. ಸಂಪ್ರದಾಯದ ರಾಗಗಳಾದ ಕಾಂಭೋಜಿ, ಹರಿ ಕಾಂಬೋಜಿ, ಅಠಾಣ, ಮಧ್ಯಮಾವತಿ, ಕಲ್ಯಾಣಿ, ಮೋಹನ, ಬಿಲಹರಿ, ದೇವಗಾಂಧಾರಿ, ಆರಭಿ, ಕಾನಡ ತೋಡಿ, ಪೂರ್ವಿ, ಹಿಂದೋಳ ರಾಗದಷ್ಟೆ ಇವರು ಬಳಸುತಿದ್ದ ಹೊಸ ರಾಗಗಳಾದ ವಾಸಂತಿ, ವೃಂದಾವನ ಸಾರಂಗ, ಸಾರಂಗ, ಪೀಲು, ಸಾರಮತಿ, ಉದಯಚಂದ್ರಿಕ, ದೇಶ್, ಮಾಂಡ್, ಆಹೇರಿ, ರೇವತಿ, ಮಾಲ್ ಕಂಸ್, ಬೇಹಾಗ್ ಚಾರುಕೇಶಿಯಂತಹ ಇತ್ತೀಚಿಗೆ ಬಳಕೆಯಾದ ರಾಗಗಳು ಕೂಡ ಅಷ್ಟೇ ಪರಿಪೂರ್ಣ. ಭಾಮಿನಿ ಪದ್ಯಗಳನ್ನು ಯಕ್ಷಗಾನದ ಹೊರತಾದ ಮಟ್ಟಿನಲ್ಲಿ ಹಾಡಬಲ್ಲ ಇವರು ಉತ್ತರ ಕನ್ನಡದ ಕಲಾವಿದರಾದ ಚಿಟ್ಟಾಣಿ ರಾಮಚಂದ್ರ ಹೆಗಡೆ, ಗೋಡೆ ನಾರಾಯಣ ಹೆಗಡೆ, ಭಾಸ್ಕರ ಜೋಶಿ, ವಿಷ್ಣು ಭಟ್ ಮುಂತಾದ ಕಲಾವಿದರೊಂದಿಗೆ, ಹಾಗು ಶುದ್ಧ ನಡುತಿಟ್ಟಿನ ನಗರ ಜಗನ್ನಾಥ ಶೇಟ್ಟಿ, ಐರೋಡಿ ಗೋಂವಿಂದಪ್ಪ, ಕೋಟ ವೈಕುಂಠ, ಎಮ್ ಎ ನಾಯ್ಕ, ರಾಮ ನಾಯರಿ, ಮೋಹನದಾಸ ಶೆಣೈ, ಉಪ್ಪುಂದ ನಾಗೇಂದ್ರ, ಗೋಪಾಲಾಚಾರ್ಯ ಮುಂತಾದ ಕಲಾವಿದರನ್ನು ಅವರ ಲಯ, ಸಾಮರ್ಥ್ಯ, ಕಂಠ ಶಕ್ತಿಗನುಗುಣವಾಗಿ ರಂಗದಲ್ಲಿ ಅವರನ್ನು ತೋರ್ಪಡಿಸಿದ್ದಾರೆ. ಹಿರಿಯ ಮದ್ದಳೆ ವಾದಕರಾದ ದುರ್ಗಪ್ಪ ಗುಡಿಗಾರ್, ಬೇಳಂಜೆ ತಿಮ್ಮಪ್ಪ ನ್ಯಾಕ್ ಗಜಾನನ ದೇವಾಡಿಗರಂತೆ ಕಿರಿಯರಾದ ಸುನಿಲ್ ಭಂಡಾರಿ, ಶ್ರೀದರ ಭಂಡಾರಿ, ರಾಕೇಶ ಮಲ್ಯರನ್ನು ಅಷ್ಟೇ ಸಲೀಸಾಗಿ ಹೊಂದಿಸಿಕೊಂಡಿದ್ದು ಇವರ ಹೆಚ್ಚುಗಾರಿಕೆ. ಯಕ್ಷಗಾನದಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಜೋಡಿಸಿ ಕ್ರಾಂತಿ ಮೂಡಿಸಿದ ಇವರು ಯಕ್ಷಗಾನ ಮತ್ತು ಸಂಗೀತದಲ್ಲಿ ಸಮಾನ ಆಸಕ್ತಿಯನ್ನು ಹೊಂದಿದ ಸಂಗೀತಾಸಕ್ತರನ್ನು ಯಕ್ಷಗಾನಕ್ಕೆ ಮಾರುಹೋಗುವಂತೆ ಮಾಡಿದ ಭಾಗವತರಲ್ಲಿ ಮೇರುಪಂಕ್ತಿಯಲ್ಲಿರುವವರು. "ಯಾವ ಕ್ಷೇತ್ರದಲ್ಲಿ ದ್ವೇಷ ನೆಲೆಯೂರಿದರು ಸಂಗೀತಕ್ಕೆ ದ್ವೇಷಿಗಳೆ ಇಲ್ಲ" ಅನ್ನುವ ರೂಢಿ ಮಾತಿನಂತೆ ಸಂಗೀತಾಸಕ್ತರಾಗಿ ಅದೇ ಕ್ಷೇತ್ರಕ್ಕೆ ಇವರು ತಮ್ಮನ್ನು ತೊಡಗಿಸಿಕೊಂಡರು. ರಂಗಸ್ಥಳದ ಎಲ್ಲಾ ತುದಿಯಲ್ಲೂ ಶರೀರ ಹಾಗೂ ಶಾರೀರದ ಕೃಪೆಯಿಂದ ವ್ಯವಸ್ಥಿತ ರಂಗ ವ್ಯವಹಾರವನ್ನು ಕರಗತ ಮಾಡಿಕೊಂಡರು ಸೊಗಸಾದ ಹಾಡುಗಾರಿಕೆ, ವ್ಯವಸಾಯ ಕ್ಷೇತ್ರದಲ್ಲಿ ಗೌರವ, ಜನಪ್ರಿಯತೆ, ವಿಶಿಷ್ಟ ರಂಗತಂತ್ರ, ವಿದ್ಯಾವಂತರನ್ನು ನಾಚಿಸುವ ಭಾಷಣ ಕಲೆ, ಮಾತುಗಾರಿಕೆ, ವಿಶಾಲವಾದ ಕಲಾಕ್ಷೇತ್ರದ ಜನರೊಂದಿಗೆ ಬಾಂಧವ್ಯ, ಸಾಮರಸ್ಯ, ಸಕಲ ಕ್ಷೇತ್ರಗಳಲ್ಲೂ ನೆಲೆಯೂರಿರುವ ಜಾತಿ ರಾಜಕೀಯದಿಂದ ಬಹುದೂರ, ಮೇಳದ ಪ್ರಧಾನ ಭಾಗವತನಿಗಿರಬೇಕಾದ ಈ ಎಲ್ಲಾ ಗುಣಗಳನ್ನು



ಹೊಂದಿದ ಅದ್ಭುತ ಭಾಗವತನೆಂದು ಇವರನ್ನು ಎಲ್ಲಾ ಅಂಗಗಳಿಂದಲೂ ಗುರುತಿಸಬಹುದು. ಚಿಕ್ಕ ಪ್ರಾಯದಲ್ಲೇ ತಮ್ಮ ವೈವಿಧ್ಯಪೂರ್ಣ ಹಾಗೂ ವೈಶಿಷ್ಯಪೂರ್ಣ ಪ್ರತಿಭೆಗೆ ಕಿರೀಟವೆಂಬಂತೆ ಧಾರೇಶ್ವರರು ಆರಿಸಿಕೊಂಡ ಕ್ಷೇತ್ರ ಸುಗಮ ಸಂಗೀತ. ಆ ಕಾಲದಲ್ಲಿ ೧೦೦೦ಕ್ಕೂ ಮಿಕ್ಕಿ ಸಾರ್ವಜನಿಕ ಕಾರ್ಯಕ್ರಮ ನೀಡಿದ್ದರು. ಭಕ್ತಿಗೀತೆಯ ಧ್ವನಿಸುರುಳಿಗಳಲ್ಲಿ ಅವರ ಧ್ವನಿ ಅಚ್ಚಾಗಿತ್ತು. ಮದ್ರಾಸಿನ ಪ್ರಸಿದ್ಧ ಸಂಗೀತಗಾರ ಟಿ.ವಿ.ಜಿ. ಹಾಗೂ ಮೃದಂಗವಾದಕ ವಾಸುದೇವನ್ ರವರ ನಿರ್ದೇಶನದಲ್ಲಿ ನಿರ್ಮಿತವಾದ ಧ್ವನಿಸುರುಳಿಯಲ್ಲಿ ಧಾರೇಶ್ವರತನವಿರುವುದು ಗಮನಿಸಬಹುದು. ತಾನು ಹತ್ತನೇ ತರಗತಿ ಮುಗಿಸುವ ಹೊತ್ತಿಗೆ ಸಂಗೀತ, ನಾಟಕದ ಗೀಳು ಹೆಚ್ಚಾಗಿ ಸಂಗೀತಗಾರನಾಗುವ ಕನಸು ಹೊತ್ತು ಸಿದ್ದಲಿಂಗೇಶ್ವರ ನಾಟ್ಯ ಸಂಘ ಸಂತನೂರು ಇಲ್ಲಿ ಸಂಗೀತ ನಿರ್ದೇಶಕ ಮತ್ತು ಹಿನ್ನಲೆ ಗಾಯಕನಾಗಿ ಭಡ್ತಿ ಪಡೆದು ಎರಡು ವರ್ಷ ಅನುಭವ ಪಡೆದರು. ೧೯೭೫ ರಲ್ಲಿ ಧಾರೇಶ್ವರರ ಜೀವನದಲ್ಲಿ ಒಂದು ಹೊಸ ತಿರುವು ಮೂಡಿತು. ಬಡಗುತಿಟ್ಟಿನ ಅನರ್ಘ್ಯ ರತ್ನಗಳಂತಹ ಭಾಗವತರನ್ನು ನೀಡಿದ ಹಂಗಾರಕಟ್ಟೆ ಯಕ್ಷಗಾನ ಕೇಂದ್ರದ ಪರಿಚಯವಾಯಿತು. ಭಾಗವತ ಕಾಳಿಂಗ ನಾವಡ, ಶಂಕರ ಭಾಗವತ, ಕೆ.ಪಿ.ಹೆಗಡೆ, ಸುರೇಶ ಶೆಟ್ಟಿ, ಹಿರಿಯಣ್ಣಾಚಾರ್, ಶಬರಾಯ ರಾಘವೇಂದ್ರ ಮಯ್ಯ, ಉಮೇಶ ಸುವರ್ಣ ಮುಂತಾದ ಹಿಮ್ಮೇಳದ ಕಲಾವಿದರನ್ನು ನೀಡಿದ ಕೇಂದ್ರದಲ್ಲಿ ನಾರಣಪ್ಪ ಉಪ್ಪೂರ ಮತ್ತು ಮದ್ದಳೆಯ ತಿಮ್ಮಪ್ಪ ನಾಯಕರ ಶಿಷ್ಯತ್ವ ಲಭಿಸಿ ಉಪ್ಪೂರರ ಸ್ಪರ್ಶ ಇವರ ಕಂಠಕ್ಕಾಯಿತು. ಆರ್ಥಿಕ ಭದ್ರತೆಯ ದೃಷ್ಟಿಯಿಂದ ಶ್ರೀ ಅಮೃತೇಶ್ವರಿ ಮೇಳದಲ್ಲಿ ವಿದ್ಯುತ್ ಸಂಯೋಜಕರಾಗಿ ಸೇರಿಕೊಂಡರು. ರಂಗದ ಬಲಭಾಗದಲ್ಲಿ ಲೈಟ್‌ಂಗ್ ಮಾಡುವಾಗ ಉಪ್ಪೂರರ ಕಂಠ ದುರ್ಗಪ್ಪ ಗುಡಿಗಾರರ ಮದ್ದಳೆಯ ನಿನಾದ ಇವರ ಹುಚ್ಚೆಬ್ಬಿಸಿತು. ಇವರ ಆಸಕ್ತಿ ಗಮನಿಸಿದ ಗುರುಗಳು ಸಂಗೀತಗಾರರನ್ನಾಗಿ ಇವರನ್ನು ಮೇಳಕ್ಕೆ ಭಡ್ತಿ ನೀಡಿದರು. ಇವರ ಕಂಠಸಿರಿಗೆ ಭವ್ಯ ಭಂಗಲೆ ನಿರ್ಮಿಸಿದ ಶಿಲ್ಪಿಗಳ ಸಾಲಿನಲ್ಲಿ ಶ್ರೀ ನಾರಣಪ್ಪ ಉಪ್ಪೂರ, ಹಾಗು ದುರ್ಗಪ್ಪ ಗುಡಿಗಾರರಿಗೆ ಅತ್ಯುನ್ನತ ಸ್ಥಾನ ಲಭಿಸುತ್ತದೆ. ಅಮೃತೇಶ್ವರೀ ಮೇಳದಲ್ಲಿ ಚಿಟ್ಟಾಣಿ ರಾಮಚಂದ್ರ ಹೆಗಡೆ, ನಗರ ಜಗನ್ನಾಥ ಶೆಟ್ಟಿ, ಗೋಡೆ ನಾರಾಯಣ ಹೆಗಡೆ, ಶಿರಿಮಠ ಪಂಜು ನಾಯಕ್, ವಾಸುದೇವ ಸಾಮಗ, ಕೋಟ ವೈಕುಂಠ, ಎಂ.ಎ. ನಾಯಕ್, ಹೊನ್ನಪ್ಪ ಗೋಕರ್ಣ ಮುಂತಾದವರ ಒಡನಾಟದಲ್ಲಿ ಪರಿಪೂರ್ಣ ಭಾಗವತರಾಗಿ ಮೂಡಿ ಬಂದರು. ಬಳಿಕ ಪಂಚಲಿಂಗೇಶ್ವರ ಮೇಳದಲ್ಲಿ ಸೇವೆ ಸಲ್ಲಿಸಿದರು.


ಸುಮಾರು ೩೮ ವರ್ಷದ ಹಿಂದೆ ಯಡಾಡಿ ಕರುಣಾಕರ ಶೆಟ್ಟರು ಹೊಸದಾಗಿ ಪೆರ್ಡೂರು ಡೇರೆಮೇಳ ನಿರ್ಮಿಸಿದಾಗ ಸ್ವತಃ ಕಲಾವಿದರಾದ ಕರುಣಾಕರ ಶೆಟ್ಟರು ಧಾರೇಶ್ವರರ ಸಾರಥ್ಯವೇ ಸಮರ್ಥವೆಂದು ತನ್ನ ಅನಂತ ಪದ್ಮನಾಭ ದಶಾವತಾರ ಯಕ್ಷಗಾನ ಮೇಳದಲ್ಲಿ ಪ್ರಧಾನ ಭಾಗವತರ ಪಟ್ಟ ನೀಡಿದರು. ದುರ್ಗಪ್ಪ ಗುಡಿಗಾರರ ಮದ್ದಳೆ, ಗಜಾನನ ದೇವಾಡಿಗರ ಚೆಂಡೆಯ ಹಿಮ್ಮೇಳದಲ್ಲಿ ನಗರ ಜಗನ್ನಾಥ ಶೆಟ್ಟಿ, ಗೋಡೆ ನಾರಾಯಣ ಹೆಗಡೆ, ಉಪ್ಪುಂದ ನಾಗೇಂದ್ರ, ರಾಮ ನಾಯರಿ, ಬೇಳಂಜೆ ಸುಂದರ ನಾಯಕ್, ಕಿನ್ನಿಗೋಳಿ ಮುಖ್ಯಪ್ರಾಣ, ರಮೇಶ ಭಂಡಾರಿ, ತೀರ್ಥಳ್ಳಿ ಗೋಪಾಲಾಚಾರ್ ಮುಂತಾದ ಕಲಾವಿದರೊಂದಿಗೆ ಗಜಗಟ್ಟಿ ಮೇಳವಾಗಿ ತಿರುಗಾಟಕ್ಕೆ ಹೊರಟ ಪೆರ್ಡೂರು ಮೇಳದಲ್ಲಿ ಕಂದಾವರ ರಘುರಾಮ ಶೆಟ್ಟರ ಶೂದ್ರ ತಪಸ್ವಿನಿ ಪ್ರಸಂಗ ಜಯಭೇರಿ ಬಾರಿಸಿ ಮೊದಲ ವರ್ಷದಲ್ಲೇ ದಾಖಲೆ ನಿರ್ಮಿಸಿತು. ಅಂದಿನ ಧಾರೇಶ್ವರರ ಕೊರವಂಜಿಯ ಕಣಿಯ ಹಾಡು, ಧಾರೇಶ್ವರರಿಗೆ ವಿಶೇಷ ಹೆಸರು ತಂದುಕೊಟ್ಟಿತು. ಮುಂದೆ ಚಾರು ಚಂದ್ರಿಕೆ, ಪದ್ಮಪಲ್ಲವಿ, ಮಾನಸ ಮಂದಾರ ಮುಂತಾದ ಹೊಸ ಪ್ರಸಂಗದ ಹಾಡುಗಳು ಇವರಿಗೆ ಅಪಾರ ಜನಮನ್ನಣೆ ನೀಡಿತು. ಧಾರೇಶ್ವರರ ನಿರ್ದೇಶನದಲ್ಲಿ ಗೋಪಾಲಾಚಾರ್ಯ ಮತ್ತು ರಾಮ ನಾಯರಿಯವರ ದೀಪ ನೃತ್ಯ, ಪದ್ಮಪಲ್ಲವಿ ಪ್ರಸಂಗದ ವಿಶೇಷ ಆಕರ್ಷಣೆಯಾಗಿತ್ತು. ಧಾರೇಶ್ವರರು ಭಾಗವತರಾಗುತಿದ್ದಂತೆ ಜನಪ್ರಿಯತೆಯ ತುದಿಗೆ ತಲುಪಲು ಅವರು ಹಾಡಿದ ಕಣಿ ಹಾಡು ಮತ್ತು ಚಾರುಚಂದ್ರಿಕೆಯ 'ಅಲ್ಲಿ ನಾನು ಇಲ್ಲಿ ನೀನು' ಮುಂತಾದ ಹೊಸ ಶೈಲಿಯ ಹಾಡುಗಳು ಸಹ ಪ್ರಮುಖ ಕಾರಣ. ಕಣಿ ಹಾಡಿನಲ್ಲಿ ಜಾನಪದ ಸೊಗಡನ್ನು ಅಳವಡಿಸಿದರೆ "ಅಲ್ಲಿ ನಾನು ಇಲ್ಲಿ ನೀನು" ಎಂಬಲ್ಲಿ ಮಿಶ್ರ ಸಾರಂಗದ ಜಾಡನ್ನು ಪ್ರಯೋಗ ಮಾಡಿದರು. "ಸ್ವಪ್ನ ಸಾಮ್ರಾಜ್ಯ" ಪ್ರಸಂಗದಲ್ಲಿ ಅವರು ಇನ್ನೊಂದು ಪ್ರಯೋಗಕ್ಕೆ ಕೈಹಾಕಿ ಸೈ ಎನಿಸಿಕೊಂಡರು. ಇಲ್ಲಿ ಶಾಸ್ತ್ರೀಯ ರಾಗಗಳನ್ನು ರಂಗಸ್ಥಳಕ್ಕೆ ತಂದರು. ಸೌಗಂಧಿಕಾ ಪುಷ್ಪ ಎಂಬ ರಾಗಮಾಲಿಕೆಯೊಂದನ್ನು ರೂಪಿಸಿಕೂಂಡರು. ಇದು ನಿರಂತರ ಅರ್ಧ ಗಂಟೆಗೂ ಮಿಕ್ಕಿದ ಹಾಡುಗಾರಿಕೆ: ರಾಗಮಾಲಿಕೆ. ಇದರಲ್ಲಿ ಮಧ್ಯಮಾವತಿ, ಕಾನಡ, ಅಠಾಣ, ಹಿಂದುಸ್ಥಾನಿ, ಕೇದಾರ, ಹಿಂದೋಳ ರಾಗಗಳನ್ನು ಕ್ರಮವಾಗಿ ಪ್ರಯೋಗಿಸಿದರು. ಇದಕ್ಕೆ ಪ್ರೇಕ್ಷಕರು ಮಂತ್ರ ಮುಗ್ಧರಾದರು. ಆದರೆ ಗಮನಿಸಬೇಕಾದ ಅಂಶವೆಂದರೆ, ಕಣಿಯ ಹೇಳುವೆ ಕೇವಲ ಜಾನಪದ ಹಾಡಾಗಿ,' ಅಲ್ಲಿ ನೀನು ಇಲ್ಲಿ ನಾನು ಭಾವ ಗೀತೆಯಾಗಿ, ನಾಗವಲ್ಲಿ ಪ್ರಸಂಗದ "ಕಣಕಣದಲೂ ಶಾರದೆ" ಹಾಡಿನಲ್ಲಿ ಭಕ್ತಿ ರಸದ ಪರಾಕಾಷ್ಟೆಯಾಗಿ, ರಾಗಮಾಲಿಕೆ ಸಂಗೀತ ಕಛೇರಿಯ ಭಾಗವಾಗಿ ರಂಗಸ್ಥಳ ಪ್ರವೇಶಿಸಲಿಲ್ಲ. ಅವೆಲ್ಲವೂ ಯಕ್ಷಗಾನದ ಸಾಧ್ಯತೆಯ ಚೌಕಟ್ಟಿನೊಳಗೆ ಯಕ್ಷಗಾನ ಹಾಡುಗಳಾಗಿಯೇ ಪ್ರವೇಶಿಸಿದವು. ಯಕ್ಷಗಾನದ್ದೇ ತಾಳ, ಹಿಮ್ಮೇಳಗಳನ್ನು ಬಳಸಿದ್ದು ಅವರ ಹೆಚ್ಚುಗಾರಿಕೆ.



ಸೃಜನಶೀಲ ಕಲಾವಿದರಾಗಿ ಧಾರೇಶ್ವರರು ಪರಂಪರೆಯ ಪ್ರಸಂಗಗಳಿಗೆ ಸನ್ನಿವೇಶಗಳಲ್ಲಿ ಮಾರ್ಪಾಡು ಮಾಡಿದ್ದಾರೆ. "ಭೀಷ್ಮ ವಿಜಯ"ದಲ್ಲಿ ಸೋತ ಅಂಬೆ ಪುನಹ ಸಾಲ್ವನ ಬಳಿಗೆ ಹೋದಾಗ ಆತನ ಅವಹೇಳನ ತಮಾಷೆ ಹುಸಿ ಮುನಿಸು ಎಂದು ಧಾರೇಶ್ವರರ ಕಲ್ಪನೆಯ ಅಂಬೆ ತಿಳಿದು ತುಜಾವಂತು ರಾಗದ ಬದಲು ಶೃಂಗಾರದ ಉದಯ ಚಂದ್ರಿಕ ರಾಗದ "ಕೇಳಯ್ಯ ಖಳರಾಯ ಪೂರ್ವದಲಿ ನಾನು" ಪದ್ಯ ಕಾಂಭೋಜಿಗೆ ಬದಲಾಗಿ ಕಲಾವತಿಯಲ್ಲಿ "ಕರುಣನಿಧಿ ಅವದರಿಸು" ಶಂಕರಾಭರಣ ರಾಗದ "ಭಾವಕಿಯ ಸೌಂದರ್ಯ ನೋಡಿ" ಯನ್ನು ಮೋಹನದಲ್ಲಿ ಬೆಳಗಿನ ಜಾವದಲ್ಲಿ ಅವರು ಅಳವಡಿಸಿದಾಗ

ಪ್ರೇಕ್ಷಕರು ಹುಚ್ಚೆದ್ದು ಕುಣಿಯುವ ದೃಶ್ಯ ಅವರ ಸೃಜನಶೀಲತೆಗೆ ಸಾಕ್ಷಿ, ಕೇವಲ ಕಚ ದೇವಯಾನಿಯ ಸಂಭಾಷಣೆಯ "ಪೋಗಿ ಬಹೆ ನಾ ನಾಗವೇಣಿಯೇ" ಪರಮ ಸಖನೆ ಕೇಳೋ, ದೇಶ್ ರಾಗದಲ್ಲಿ ಬಬ್ರುವಾಹನದ 'ಶೃಂಗರಿಸಿ ಉರಗೇಂದ್ರ ನಂದನೆ', ಪದ್ಯಗಳೆ ಸಾಕು ಅವರ ಪೌರಾಣಿಕ ಪ್ರಸಂಗದ ನೆಲೆಗಟ್ಟನ್ನು ಅರಿಯಲು. "ಬೊಬ್ಬೆ ಹೊಡೆಯುವುದು ಭಾಗವತಿಕೆ ಅಲ್ಲ" ಅನ್ನುವ ಹಿರಿಯ ಕಲಾವಿದ ದಿ ಕೆರೆಮನೆ ಮಹಾಬಲ ಹೆಗಡೆಯವರ ಮಾತನ್ನು ಸಾರ ಸಗಟಾಗಿ

ಪಾಲಿಸಿಕೊಂಡು ಬಂದ ಸಜ್ಜನ ಕಲಾವಿದರಾಗಿ ವಿದ್ವಜ್ಜನರ ಮನ್ನಣೆಗೆ ಪಾತ್ರರಾದರು. ಧಾರೇಶ್ವರರ ವಿಶೇಷತೆಯೇ ಅವರ ಕೋಮಲ ಕಂಠ, ಶಬ್ದಗಳ ಸ್ಪಷ್ಟ ಉಚ್ಚಾರ, ರಾಗಗಳ ಬಳಕೆಯಲ್ಲಿನ ಜಾಣ್ಮೆ, ಶೃಂಗಾರ, ಕರುಣ, ಭಕ್ತಿ ರಸದ ಪದ್ಯಗಳಲ್ಲಿ ಅವರದ್ದು ಎತ್ತಿದ ಕೈ. ಕಾರ್ತವೀರ್ಯನ ಜಲಕ್ರೀಡೆ, ಸಾಲ್ವನ ಶೃಂಗಾರ, ಸುಧನ್ವ–ಪ್ರಭಾವತಿ, ಭೀಷ್ಮ–ಪರಶುರಾಮ, ಶರ್ಮಿಷ್ಟೆ–ದೇವಯಾನಿ. ಗದಾಯುದ್ಧದ ನಿನ್ನಯ ಬಲುಹೇನು, ಕಪಟನಾಟಕ ರಂಗ, ಅಠಾಣ ರಾಗದ ಶ್ರೀ ಮನೋಹರ ಸ್ವಾಮಿ ಪರಾಕು, ಮುಂತಾದ ಅವರ ಕಂಠದಿಂದ ಮೂಡಿಬಂದ ಪದ್ಯಗಳು ಭಾಗವತಿಕೆಯ ಆಸಕ್ತರು ಅನುದಿನವೂ ನೆನಪಿಸುವ ಪದ್ಯಗಳಾಗಿ ದಾಖಲಾಗಿದೆ. ಧಾರೇಶ್ವರರ ಹಾಡುಗಾರಿಕೆಯನ್ನು ಗಿಮಿಕ್ಸ್ ಎಂದೂ, ಭಾವಗೀತೆ ಎಂದೂ ವಿಮರ್ಶಿಸಿದ ಒಂದು ವರ್ಗವಿದೆ. ಅದನ್ನೆ ಗಿಮಿಕ್ಸ್ ಅನ್ನುವ ಬದಲು ಪ್ರಯೋಗಶೀಲತೆ ಎನ್ನಬಹುದಲ್ಲ. ಇಳಿ ಶ್ರುತಿಯಲ್ಲಿ ಮಾತ್ರ ಹಾಡಬಲ್ಲರು ಅನ್ನುವ ಕೆಲವರಿಗೆ ಪೌರಾಣಿಕ ಪ್ರಸಂಗದಲ್ಲಿ ಕಪ್ಪು ಮೂರರಲ್ಲೂ ಬಿಳಿ ನಾಲ್ಕರಲ್ಲೂ ಹಾಡಿ ತೋರಿಸಿ ಹುಬ್ಬೇರಿಸುವಂತೆ ಮಾಡಿದ್ದಾರೆ. ಸುಗಮ ಸಂಗೀತ, ಶಾಸ್ತ್ರೀಯ ಸಂಗೀತವನ್ನು ಯಕ್ಷಗಾನಕ್ಕೆ ಅವರು ಪೋಣಿಸಿದ್ದು ಈ ಕಲೆಗಿರುವ ಮೈಲಿಗೆಯನ್ನು ತೊಡೆದು ಹಾಕಿದೆ. ಇದರಿಂದ ಭಾಗವತಿಕೆಯ ಕ್ಷೇತ್ರ ಅಪಾರ ವಿಸ್ತಾರ ಪಡೆಯಿತು. ಎಡದಲ್ಲಿ ನಾವಡರನ್ನೂ ಬಲಭಾಗದಲ್ಲಿ ಧಾರೇಶ್ವರರನ್ನು ಕುಳ್ಳಿರಿಸಿ ನಾರಣಪ್ಪ ಉಪ್ಪೂರರು ಮಾಡಿದ ಸಾಧನೆ ಸಾರ್ಥಕವಾಯಿತು. ಯಾವುದೆ ಕಲಾವಿದ ಹೊಸತನವನ್ನು ಅರ್ಥಪೂರ್ಣವಾಗಿ ತಂದಾಗ ಕಲೆ ಪರಿಪೂರ್ಣವಾಗುತ್ತದೆ. ಯಾವುದೇ ಕಲೆ ನಿಂತ ನೀರಾಗಬಾರದು ಸದಾ ಹರಿಯುತ್ತಿರಬೇಕು ಆದರೆ ದಡಮೀರಿ ಹರಿಯದಂತಹ ಎಚ್ಚರ ಬೇಕು. ಅಂತಹ ಎಚ್ಚರದಿಂದ ಪರಿಪೂರ್ಣ ಬಡಗುತಿಟ್ಟಿನ ಭಾಗವತರಾಗಿ ಮೂಡಿ ಬಂದವರು ಗುಂಡ್ಮಿ ಕಾಳಿಂಗ ನಾವಡರು ಮತ್ತು ಸುಬ್ರಹ್ಮಣ್ಯ ಧಾರೇಶ್ವರರು. ಇವರೀರ್ವರು ಈ ಶತಮಾನದ ಉತ್ತರಾರ್ಧದ ಯುಗಪುರುಷ ಭಾಗವತರೆಂದಲ್ಲಿ ತಪ್ಪಾಗದು. ವೃತ್ತಿ ರಂಗಭೂಮಿಯಿಂದ ನಿರ್ಗಮಿಸುತ್ತಿರುವ ಅವರ ಭಾಗವತಿಕೆ ಕೇಳುವ ಅವಕಾಶ ಡೇರೆಯೊಳಗೆ ಕುಳಿತು ಸಾಧ್ಯವಾಗದಿದ್ದರೂ ಅಲ್ಲಲ್ಲಿ ಅವರದ್ದೇ ಆದ ಕಾರ್ಯಕ್ರಮಗಳು ಭಾಗವತಿಕೆಯ ಕಮ್ಮಟಗಳು ನೆರವೇರಲಿವೆ. ಸುಸಂಸ್ಕೃತ ವಿದ್ಯಾವಂತ ಕುಟುಂಬ ಹೊಂದಿದ ಅವರದ್ದು ಪತ್ನಿ ಒಬ್ಬ ಪುತ್ರ ಕಾರ್ತಿಕ, ಪುತ್ರಿ



ತೇಜಸ್ವಿನಿಗೆ ಒಳ್ಳೆಯ ವಿದ್ಯೆ ನೀಡಿ ಕಲಾವಿದರಿಗೆ ಆದರ್ಶಪ್ರಾಯರಾಗಿದ್ದಾರೆ. ತಂದೆಗೆ ಚಂಡೆಯ ಸಾಥಿ ನೀಡಿದ ಗಜಾನನ ದೇವಾಡಿಗರ ಚೆಂಡೆಯ ನಿನಾದಕ್ಕೆ ಮಾರು ಹೋಗಿ ತಂದೆಯ ವಿರೋಧದ ನಡುವೆಯು ಉತ್ತಮ ಚೆಂಡೆ ವಾದಕನಾಗಿದ್ದು ಪುತ್ರ ಕಾರ್ತಿಕನ ದೊಡ್ಡ ಸಾಧನೆ ಎನ್ನಬಹುದು. ನನಗೂ ಕಾರ್ತಿಕನ ಚೆಂಡೆವಾದನಕ್ಕೆ ಪದ್ಯ ಹೇಳುವ ಅವಕಾಶ ಲಭಿಸಿತ್ತು. ಸದ್ಯ ವೃತ್ತಿಗೆ ವಿದಾಯ ಹೇಳುತ್ತಿರುವ ಮೇರು ಭಾಗವತರಿಗೆ ಕಲಾಮಾತೆ ದುರ್ಗಾಪರಮೇಶ್ವರಿ ಅಮ್ಮನವರು ಆಯುರಾರೋಗ್ಯ ಸಕಲ ಸಂಪತ್ತನ್ನು ನೀಡಿ ಇವರಿಂದ ಇನ್ನಷ್ಟು ಹೊಸ ಹೊಸ ರಾಗಗಳು ಮೂಡಿ ಬರಲಿ ಎಂದಷ್ಟೆ ನಾವೆಲ್ಲ ಬಯಸಬಹುದಾಗಿದೆ.

***ಲೇಖಕರು – ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ ಮಣಿಪಾಲ***

---

# ಧೀರ ಕಲೆಯೊಳಗೆ ಕೀರವಾಣಿಯರು – 20

***ಯಕ್ಷ ದೀವಿಗೆ ಬೆಳಗಿದ ಆರತಿ – ಇವರ ಆಸಕ್ತಿ ಬಹುಮುಖಿ***














**ಎ**ಳವೆಯಲ್ಲಿ ಯಕ್ಷಗಾನಕ್ಕೆ ಪೂರಕವಾದ ಪರಿಸರದಲ್ಲೇ ಹುಟ್ಟಿದ ಆರತಿಯವರು ನಮ್ಮ ಕರಾವಳಿಗೆ ದೂರದ ತುಮಕೂರಿನಲ್ಲಿ ಯಕ್ಷಗಾನದ ಗೆಜ್ಜೆ ನಾದವನ್ನು ಹೊರಡಿಸಿ, ಯಕ್ಷಗಾನವನ್ನು ಅಲ್ಲಿ ಕಲಾಭಿಮಾನಿಗಳಿಗೆ ಪರಿಚಯಿಸಿದವರು. ತಮ್ಮ ಹೆಸರಿನ ಜೊತೆಗೆ ತನ್ನ ಹುಟ್ಟೂರಾದ ಪಟ್ರಮೆಯನ್ನು ಸೇರಿಸಿಕೊಂಡು ಊರ ಹೆಸರನ್ನೂ ಎಲ್ಲರಿಗೂ ಪರಿಚಯಿಸಿದ್ದಾರೆ. ಕೊರೊನಾ ಲಾಕ್ ಡೌನ್ ಸಮಯದಲ್ಲಿ ಮನೆಯಲ್ಲೇ ಇರಬೇಕಾದ ಸಂದರ್ಭ ಎಲ್ಲರಿಗೂ ಒದಗಿದ್ದಾಗ ಯಕ್ಷಗಾನ ಬಯಲಾಟ ಅಕಾಡೆಮಿಯ ಮೂಲಕ ಅನೇಕ ಹಿರಿಯ ಯಕ್ಷಗಾನ ಕಲಾವಿದರ ಜೀವನವನ್ನು ಯಕ್ಷಾಭಿಮಾನಿಗಳಿಗೆ ತೆರೆದಿಡುವ ಮೂಲಕ ಮನೆಮಾತಾದವರು ಶ್ರೀಮತಿ ಆರತಿ ಪಟ್ರಮೆ.

ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಭೀಮ ಭಟ್ ಹಾಗೂ ಶ್ರೀಮತಿ ಲೀಲಾ ಭಟ್ ಅವರ ಮಗಳಾಗಿ 06-01-1983ರಂದು ಜನಿಸಿದ ಆರತಿಯವರು ಯಕ್ಷಗಾನಾಸಕ್ತಿಯುಳ್ಳ ಸಹೃದಯರು ಇದ್ದ ಕಲಾ ಪರಿಸರದಲ್ಲೇ ಬೆಳೆದವರು. ಸ್ವತಃ ತಂದೆಯವರಾಧ ಭೀಮ ಭಟ್ ಅವರು ಯಕ್ಷಗಾನಾಸಕ್ತರು ಮಾತ್ರವಲ್ಲದೇ ಹವ್ಯಾಸಿ ಅರ್ಥಧಾರಿಗಳು. ಆವತ್ತಿನ ಕಾಲದಲ್ಲಿ ನಡೆಯುತ್ತಿದ್ದ ಮನೆ–ಮನೆ ತಾಳಮದ್ದಳೆಗಳಲ್ಲಿ ಅವರು ಅರ್ಥಧಾರಿಗಳಾಗಿ ಭಾಗವಹಿಸುತ್ತಿದ್ದಾಗ ಕುತೂಹಲದ ಕಣ್ಣಿನಿಂದ ವೀಕ್ಷಿಸುತ್ತಾ ಇದ್ದರು, ಊರಿಗೆ ವರ್ಷಕ್ಕೆ ಮೂರೋ ನಾಲ್ಕೋ ಬಾರಿ ಬರುತ್ತಿದ್ದ ಯಕ್ಷಗಾನದ ಮೇಳಗಳ ಪ್ರದರ್ಶನಗಳನ್ನು ವಾರಕ್ಕೆ ಮೊದಲೇ ಉತ್ಸುಕತೆಯಿಂದ ಕಾದು ನೋಡುತ್ತಾ ಇದ್ದ ಆರತಿಯವರಿಗೆ ಮುಂದೊಂದು ದಿನ ತಾನೂ ಯಕ್ಷಗಾನ ಕಲಾವಿದೆಯಾಗಬೇಕು ಎಂಬ ಆಸೆ ಚಿಗುರೊಡೆದದ್ದು ಅಲ್ಲೇ. ಇದಕ್ಕೆ ನೀರೆರೆದ್ದು ಇವರು ಕಲಿತ ಸರಕಾರಿ ಪ್ರೌಢಶಾಲೆ ನಿಡ್ಲೆಯ ವಿಜ್ಞಾನ ಶಿಕ್ಷಕರು, ಹವ್ಯಾಸಿ ಕಲಾವಿದರೂ ಆಗಿದ್ದ ಶ್ರೀ ವೆಂಕಟೇಶ್ ಎಸ್. ತುಳುಪುಳೆಯವರು. ಅವರಿಂದ ನಾಟ್ಯಾಭ್ಯಾಸವನ್ನು ಮಾಡಿ ದಕ್ಷಯಜ್ಞದ ದಕ್ಷನಾಗಿ 1997ರ ಡಿಸೆಂಬರ್ 17ರಂದು ಯಕ್ಷರಂಗವನ್ನು ಕಲಾವಿದೆಯಾಗಿ ಪ್ರವೇಶಿಸಿದರು. ದಿನಾಂಕವನ್ನು ಕೂಡ ನೆನಪಿಟ್ಟುಕೊಂಡ ಆರತಿಯವರ ಯಕ್ಷಗಾನ ಪ್ರೇಮ ಎಷ್ಟಿರಬೇಡ?



ಬಳಿಕ ಪದವಿಪೂರ್ವ ಹಾಗೂ ಪದವಿ ಶಿಕ್ಷಣವನ್ನು ಎಸ್ ಡಿ ಎಂ ಕಾಲೇಜು ಉಜಿರೆಯಲ್ಲಿ ಪಡಕೊಂಡಾಗ ಅವರ ಯಕ್ಷಗಾನದ ಬುಡ ಗಟ್ಟಿಯಾಗುತ್ತಾ ಬಂತು. ಅರ್ಥಾತ್ ಕಲಿಯುವುದಕ್ಕೂ, ಬೆಳೆಯುವುದಕ್ಕೂ ಅವಕಾಶವಿತ್ತು. ಉಜಿರೆ ಅಶೋಕ ಭಟ್ಟರಿಂದ ಮಾತುಗಾರಿಕೆಯ ತರಬೇತಿ, ಸೂರಿಕುಮೇರು ಗೋವಿಂದ ಭಟ್ಟರಿಂದ ರಂಗನಡೆಗಳನ್ನು ಅಭ್ಯಾಸ ಮಾಡಿಕೊಂಡು ಇವರೀರ್ವರ ಮಾರ್ಗದರ್ಶನ ಆರತಿ ಪಟ್ರಮೆಯವರನ್ನು ಒಬ್ಬ ಒಳ್ಳೆಯ ಯಕ್ಷಗಾನ ಕಲಾವಿದೆಯಾಗಿ ರೂಪಿಸಿತೆನ್ನಬಹುದು. ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಪ್ರತಿಷ್ಠಿತ ಯಕ್ಷೋತ್ಸವ ಸ್ಪರ್ಧೆ–2002ರಲ್ಲಿ ಗದಾಯುದ್ಧದ ಕೌರವನ ಪಾತ್ರಕ್ಕೆ ವೈಯಕ್ತಿಕ ಪ್ರಥಮ ಪ್ರಶಸ್ತಿಯನ್ನು ಪಡೆದುಕೊಂಡವರಿವರು. ಎಸ್ ಡಿ ಎಮ್ ಉಜಿರೆಯಲ್ಲಿ ಪದವಿ ಶಿಕ್ಷಣವನ್ನು ಪೂರೈಸಿದ ಬಳಿಕ ಮಂಗಳೂರು ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಿಂದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. 26-11-2007ರಲ್ಲಿ ಸಿಬಂತಿ ಪದ್ಮನಾಭ ಅವರನ್ನು ವಿವಾಹವಾಗಿ ಪತಿಯ ವೃತ್ತಿಗಾಗಿ ತುಮಕೂರಿಗೆ ಬಂದ ಆರತಿಯವರು ಅಲ್ಲಿಯೇ ತಮ್ಮ ವೃತ್ತಿ ಬದುಕನ್ನು ಕಟ್ಟಿಕೊಂಡರು. ಮನೆ, ಸಂಸಾರ, ಖುಷಿ, ಸಂವೃತರೆನ್ನುವ ಮುದ್ದಾದ ಮಕ್ಕಳ ಲಾಲನೆ–ಪಾಲನೆಯ ಜೊತೆ ಪತಿಯ, ಮನೆಯವರ ಪ್ರೋತ್ಸಾಹ ಇವರ ಕಲಾ ಬದುಕನ್ನು ಇನ್ನಷ್ಟು ಭದ್ರವಾಗಿಸಿತು. ಅನೇಕ ಪೌರಾಣಿಕ ಪ್ರಸಂಗಗಳಲ್ಲಿ ಕಿರೀಟ ವೇಷಗಳಾದ ಕೌರವ, ಅತಿಕಾಯ, ಕರ್ಣ, ಅರ್ಜುನ, ಇಂಗ್ಲೀಷ್ ನಾಟಕದ ಯಕ್ಷಗಾನ ಸ್ವರೂಪವಾದ ಮ್ಯಾಕ್ ಬೆತ್ ಪ್ರಸಂಗದ ಮ್ಯಾಕ್ ಬೆತ್, ಬಣ್ಣದ ವೇಷಗಳಾದ ಮಹಿಷಾಸುರ, ತಾಟಕಿ, ಪಕಡಿ ವೇಷಗಳಾದ ಕೃಷ್ಣ, ವಿಷ್ಣು, ಸುಧನ್ವ, ಸ್ತ್ರೀ ಪಾತ್ರಗಳಾದ ಸೀತೆ, ದಾಕ್ಷಾಯಿಣಿ ಮುಂತಾದ ಅನೇಕ ಪಾತ್ರಗಳನ್ನು ನಿರ್ವಹಿಸಿದ ಅನುಭವ ಇವರದು. ಇವರು ಕೋಲುಕಿರೀಟದ ಪಾತ್ರಗಳೆಂದರೆ ಇಷ್ಟ, ಸ್ತ್ರೀ ಪಾತ್ರ ಸ್ವಲ್ಪ ಕಷ್ಟ ಎನ್ನುತ್ತಾರೆ. ತಾನು ವೃತ್ತಿಯನ್ನು ಕಂಡುಕೊಂಡಿರುವ ಊರಿನಲ್ಲಿ ಜನರಿಗೆ ಯಕ್ಷಗಾನವನ್ನು ತಲುಪಿಸಬೇಕು, ತನ್ನ ಹವ್ಯಾಸವನ್ನು ಆ ಮೂಲಕ ಜೀವಂತವಾಗಿರಿಸಬಹುದು ಎನ್ನುವ ನಿಟ್ಟಿನಲ್ಲಿ 2014ರ ಸಪ್ಟೆಂಬರ್ 7ರಂದು ತುಮಕೂರಿನಲ್ಲಿ ವೃತ್ತಿಯಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರೂ, ಸ್ವತಃ ಹವ್ಯಾಸಿ ಯಕ್ಷಗಾನ ಕಲಾವಿದರಾಗಿರುವ ಪತಿ ಸಿಬಂತಿ ಪದ್ಮನಾಭರ ಜೊತೆಗೂಡಿ "ಯಕ್ಷದೀವಿಗೆ" ಎಂಬ ತಂಡವೊಂದನ್ನು ಸ್ಥಾಪಿಸಿದರು. ಆಟ–ಕೂಟಗಳನ್ನು, ಯಕ್ಷಗಾನ ಹಿಮ್ಮೇಳ–ಮುಮ್ಮೇಳ ತರಗತಿಗಳನ್ನು, ಇತರೆ ಯಕ್ಷಗಾನ ಸಂಬಂಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದರು. ತಮ್ಮ ಮಕ್ಕಳೂ ಅದರಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದರು.

ಅಕ್ಟೋಬರ್ 15, 2019ರಿಂದ ಅಕ್ಟೋಬರ್ 14, 2022ರವರೆಗೆ ಅನಿರೀಕ್ಷಿತವಾಗಿ ಬಂದೊದಗಿದ ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯತ್ವವನ್ನು ಸಮರ್ಥವಾಗಿ ನಿರ್ವಹಿಸಿ, ಅರ್ಥಪೂರ್ಣವಾಗಿಸಿದರು. ಅಕಾಡೆಮಿಯ ನೇತೃತ್ವದಲ್ಲಿ ಯಕ್ಷಗಾನೀಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ, ಕೊರೊನಾ ಸಮಯದಲ್ಲಿ ಇವರು ಹೆಚ್ಚಿನ ಕಲಾಪ್ರೇಮಿಗಳಿಗೆ ಚಿರಪರಿಚಿತರಾದದ್ದು ಇವರು ನಡೆಸಿದ "ಮಾತಿನ ಮಂಟಪ" ಹಾಗೂ "ನೆನಪಿನ ಬುತ್ತಿ" ಎನ್ನುವ ಯಕ್ಷಗಾನ ಕಲಾವಿದರುಗಳ ಸಂದರ್ಶನಗಳ ಮೂಲಕ. ಅದನ್ನು ಅಕ್ಷರರೂಪಕ್ಕೆ ಇಳಿಸುವುದಕ್ಕೆ ಪ್ರಯತ್ನಗಳು ನಡೆಯುತ್ತಾ ಇವೆ. ಇದರ ಜೊತೆಗೆ ಇವರ ಸಂಸ್ಥೆ "ಯಕ್ಷದೀವಿಗೆ"ಯನ್ನು ಅಧ್ಯಯನ ಕೇಂದ್ರವಾಗಿಸುವ ಯೋಚನೆಯೂ ಇವರಿಗಿದೆ.

1970ರಲ್ಲಿ ಸೂರಿಕುಮೇರು ಗೋವಿಂದ ಭಟ್ಟರು, ಡಿವಿಜಿಯವರ ಕನ್ನಡ ಅನುವಾದದ "ಮ್ಯಾಕ್ ಬೆತ್" ನಾಟಕವನ್ನು ಆಧರಿಸಿ ಯಕ್ಷಗಾನ ಪ್ರಸಂಗವೊಂದನ್ನು ರಚಿಸಿದ್ದರು. ಅದನ್ನು ಉಜಿರೆ ಎಸ್ ಡಿ ಎಮ್ ಕಾಳೇಜಿನ ವಿದ್ಯಾರ್ಥಿಗಳು ಪ್ರದರ್ಶಿಸಿದ್ದರಷ್ಟೇ. ಮತ್ತೆಲ್ಲೂ ಅದು ಪ್ರದರ್ಶನ ಕಾಣಲಿಲ್ಲ. ಹೇಗೋ ಅದರ ಪ್ರಸಂಗದ ಪ್ರತಿ ಒದಗಿ, ಅದನ್ನು ತುಮಕೂರಿನಲ್ಲಿ ಪ್ರದರ್ಶಿಸಿ ಜನಮೆಚ್ಚುಗೆ ಪಡೆದ ಹಿರಿಮೆ ಆರತಿ ಪಟ್ರಮೆಯವರದು. ಇವರು ಪ್ರಸ್ತುತ ವಿಲಿಯಂ ಶೇಕ್ಸ್ ಪಿಯರ್ ನಾಟಕಗಳ ಯಕ್ಷಗಾನ ರೂಪಾಂತರಗಳ ಬಗ್ಗೆ ಸಂಶೋಧನೆಯನ್ನು ನಡೆಸುತ್ತಿದ್ದಾರೆ. ಇವರು ಯಕ್ಷಗಾನ ಕಲಾವಿದೆ ಮಾತ್ರವಲ್ಲದೇ ತಾಳಮದ್ದಳೆ



ಅರ್ಥದಾರಿಯಾಗಿಯೂ ಗುರುತಿಸಿಕೊಂಡಿದ್ದಾರೆ. ಇವರು ಗುರುತಿಸಿಕೊಂಡ ಮತ್ತೊಂದು ಕ್ಷೇತ್ರವೆಂದರೆ ಅದು ಸಾಹಿತ್ಯ. ನಾಡಿನ ಹಲವಾರು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವ ಅಭ್ಯಾಸವುಳ್ಳ ಇವರು, ಕಳೆದ ಏಳು ವರ್ಷಗಲಿಂದ ಉತ್ಥಾಮ ಪತ್ರಿಕೆಗೆ 'ಮನೆ ಮಾನಿನಿ' ಎಂಬ ಅಂಕಣವನ್ನು ಬರೆಯುತ್ತಿದ್ದಾರೆ. ಎಲ್ಲಿಹಳು ನ್ನ ಛಾಯಾ (ಕವನ ಸಂಕಲನ), ಬದುಕು ನಂಬಿಕೆಯ ಕಡಲು ( ಅಂಕಣ ಬರೆಹಗಳ ಸಂಗ್ರಹ), ನವೋತ್ಥಾನದ ಹರಿಕಾರ ಸ್ವಾಮಿ ವಿವೇಕಾನಂದ (ರಾಷ್ಟ್ರೀಯ ಚಿಂತನೆಗಳು), ತೀರದ ತುಡಿತ (ಅಂಕಣ ಬರೆಹಗಳ ಸಂಗ್ರಹ), ಏಳಬಯಸಿದರಷ್ಟೇ ಬೆಳಗು (ಜೀವನ ಪ್ರೀತಿಯ ಬರಹಗಳು), ಇವರ ನಿರೂಪಣೆಯಲ್ಲಿ "ಅನಾಮಧೇಯ ಅಧ್ಯಾಪಕನ ಆತ್ಮಚರಿತ್ರೆ" (ಕಡಂಬಿಲ ಭೀಮ ಭಟ್ಟರ ಜೀವನ ಕಥನ) ಮುಂತಾದ ಕೃತಿಗಳ ಕರ್ತೃ. ಇವರ ಸಾಧನೆಯನ್ನು ಅನೇಕ ಸಂಘ–ಸಂಸ್ಥೆಗಳು ಗುರುತಿಸಿವೆ. 2022ರಲ್ಲಿ ಆಸ್ರಣ್ಣ ಪ್ರಶಸ್ತಿಯೂ ಇವರಿಗೊಲಿದಿದೆ. ಇವರ ಕಲಾ ಜೀವನ, ವೃತ್ತಿ ಜೀವನ ಇನ್ನಷ್ಟು ಸೊಗಸಾಗಲಿ ಎಂಬ ಆಶಯವಷ್ಟೇ ನಮ್ಮದು. ***ಲೇಖಕರು– ಸಾಯಿಸುಮಾ ಎಂ. ನಾವಡ, ಕಾರಿಂಜ***

**ನಿಮಗಿದು ಗೊತ್ತೇ? – ಸಭಾಲಕ್ಷಣದ ಪ್ರಕಾರ ರಂಗಸ್ಥಳ ಹೀಗಿರಬೇಕು: ರಂಗಮಂಟಪವು ಐದು ಹಸ್ತ ಉದ್ದ, ಐದು ಹಸ್ತ ಅಗಲ ಮತ್ತು ಹತ್ತು ಹಸ್ತ ಎತ್ತರವಿರಬೇಕೆಂದು ಸಭಾಲಕ್ಷಣ ಹೇಳುತ್ತದೆ. ಈ ಅಳತೆ ಪ್ರಮಾಣವನ್ನು ರಾಘವ ನಂಬಿಯಾರರು ಹೀಗೆ ವಿಶ್ಲೇಷಿಸಿದ್ದಾರೆ: ಇದರ ಪ್ರಕಾರ ರಂಗಸ್ಥಳ ಚೌಕಾಕೃತಿಯದು. ಅದರ ಅಳತೆ 5 ಹಸ್ತ X 5 ಹಸ್ತ. ಎತ್ತರ ಮಾತ್ರ 10 ಹಸ್ತ. ಒಂದು ಹಸ್ತವೆಂದರೆ ೨೪ ಅಂಗುಲ ಅಥವಾ 18 ಇಂಚು. ಹಸ್ತವೆಂಬುದಕ್ಕೆ ಕಿಟ್ಟೆಲ್ ನಿಘಂಟು ಮೊಣಕೈ ಎಲುಬಿನಿಂದ ಮಧ್ಯ ಬೆರಳ ತುದಿಯವರೆಗಿನ ಒಂದು ಮಾಪನವೆಂದು ಅರ್ಥ ನೀಡಿದೆ. ಇದರ ಪ್ರಕಾರವೂ 'ಹಸ್ತ' ಎಂದರೆ ಒಂದೂವರೆ ಅಡಿ ಆಗುತ್ತದೆ ಮತ್ತು ರಂಗಸ್ಥಳದ ಅಳತೆ 7.5 ಅಡಿ 7.5 ಅಡಿ 15 ಅಡಿ ಆಗಿರುತ್ತದೆ. [ಸಭಾಲಕ್ಷಣ, ಪಾವಂಜೆ ಪ್ರತಿ 1980] [ಹಿಮ್ಮೇಳ, ಪುಟ 87]**

# ಶಿರೂರು ಫಣಿಯಪ್ಪಯ್ಯ ಸಂಸ್ಮರಣೆ ಮತ್ತು ಪ್ರಸಂಗ ಸಂಪುಟ ಬಿಡುಗಡೆ ಕಾರ್ಯಕ್ರಮ



**ಫ**ಣಿಗಿರಿಪ್ರತಿಷ್ಠಾನ ಶಿರೂರು ಇವರು ಯಕ್ಷಗಾನ ಕೇಂದ್ರ ಐರೋಡಿ–ಹಂಗಾರಕಟ್ಟೆ ಇವರ ಸಹಯೋಗದೊಂದಿಗೆ ಆಯೋಜಿಸಿದ್ದ ಯಕ್ಷಗಾನ ಕವಿ ಶಿರೂರು ಫಣಿಯಪ್ಪಯ್ಯ (1918 -2004) ಸಂಸ್ಮರಣಾ ಕಾರ್ಯಕ್ರಮ 09-12 -2023ರ ಸಂಜೆ ಸದಾನಂದ ರಂಗ ಮಂಟಪ ಗುಂಡ್ಮಿ ಸಾಲಿಗ್ರಾಮದಲ್ಲಿ ನಡೆಯಿತು. ಶಿರೂರು ಫಣಿಯಪ್ಪಯ್ಯ ವಿರಚಿತ ಶ್ರೀ ಕೃಷ್ಣಗಾರುಡಿ, ಮಹೇಂದ್ರ ವಿಜಯ ಯಕ್ಷಗಾನ ಪ್ರಸಂಗಗಳೊಂದಿಗೆ ಅವರು ತಾಳೆಗರಿ ಗ್ರಂಥಗಳಿಂದ ಹಸ್ತಪ್ರತಿ ಮಾಡಿಟ್ಟ ಹಟ್ಟಿಯಂಗಡಿ ರಾಮ ಭಟ್ಟ ವಿರಚಿತ ಬಿಲ್ಲಹಬ್ಬ ಕಂಸವಧೆ, ರತ್ನಪುರದ ರಾಮ ವಿರಚಿತ ಮೂಲಕಾಸುರ ಕಾಳಗ ಎಂಬ ಒಟ್ಟು ನಾಲ್ಕು ಪ್ರಸಂಗ ಕೃತಿಗಳನ್ನು ಒಳಗೊಂಡ ಯಕ್ಷಗಾನ ಪ್ರಸಂಗ ಸಂಪುಟ ಹಾಗೂ ಫಣಿಗಿರಿ ಪ್ರತಿಷ್ಠಾನದ ಯಕ್ಷಕವಿ ನಮನ ಮಾಲಿಕೆಯ ಎರಡನೆಯ ಕೃತಿ ಕ.ಪು. ಸೀತಾರಾಮ ಕೆದಿಲ್ಲಾಯ ವಿರಚಿತ ಶಲ್ಯಪರ್ವ– ಗದಾಪರ್ವಪ್ರಸಂಗ ಕೃತಿಗಳು ಈ ಸಮಾರಂಭದಲ್ಲಿ ಲೋಕಾರ್ಪಣೆಗೊಂಡವು. ಈ ಎಲ್ಲಾ ಪ್ರಸಂಗಕೃತಿಗಳನ್ನು ಈ ವರ್ಷದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕತ ಹಿರಿಯ ವಿದ್ವಾಂಸ ಡಾ ಕಬ್ಬಿನಾಲೆ ವಸಂತ ಭಾರದ್ವಾಜರು ಸಂಪಾದಿಸಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ನಂದಳಿಕೆ ಬಾಲಚಂದ್ರ ರಾವ್, ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ ಭಾಸ್ಕರ್ ಕೊಗ್ಗ ಕಾಮತ, ಕಣಿಪುರ ಯಕ್ಷಗಾನ ಮಾಸ ಪತ್ರಿಕೆಯ ಮುಖ್ಯಸ್ಥ ಎಂ ಎನ್ ಚಂಬಲ್ತಿಮಾರ್, ಕನ್ಯಾನ ರಾಜಗೋಪಾಲ್ ಇವರು ಭಾಗವಹಿಸಿದ್ದರು. ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ಕನ್ನಡ ಉಪನ್ಯಾಸಕ ಶಿವಕುಮಾರ ಅಳಗೋಡು ಬಿಡುಗಡೆಯಾದ ಪ್ರಸಂಗ ಕೃತಿಗಳ ಕುರಿತು ಮಾತನಾಡಿದರು. ಹಂಗಾರಕಟ್ಟೆ ಯಕ್ಷಗಾನ ಕೇಂದ್ರದ ಕಾರ್ಯದರ್ಶಿ ರಾಜಶೇಖರ್ ಹೆಬ್ಬಾರರು ಎಲ್ಲ ಗಣ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಫಣಿಗಿರಿ ಪ್ರತಿಷ್ಠಾನದ ಉಮೇಶ ಶಿರೂರು ಎಲ್ಲರಿಗೂ ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು. ರಾಮಚಂದ್ರ ಐತಾಳರು ಕಾರ್ಯಕ್ರಮವನ್ನು ನಿರ್ವಹಿಸಿದ್ದರು. ಸಭಾ ಕಾರ್ಯಕ್ರಮದ ಪೂರ್ವದಲ್ಲಿ ಮೈಸೂರಿನ ಶ್ರೀನಿಧಿ ಶಿರೂರು ಇವರ ಕೊಳಲುವಾದನ ಮತ್ತು ಸಭೆಯ ನಂತರ ಶಿರೂರು ಫಣಿಯಪ್ಪಯ್ಯ ವಿರಚಿತ ಯವ್ವನಾಶ್ವನ ಕಾಳಗ ಯಕ್ಷಗಾನ ನಡೆಯಿತು. ಹಿಮ್ಮೇಳದಲ್ಲಿ ಸುರೇಶ ಶೆಟ್ಟಿ ಭಾಗವತರಾಗಿ, ಶಶಿ ಆಚಾರ್ ಮದ್ದಳೆಗಾರರಾಗಿ, ರಾಕೇಶ ಮಲ್ಯ ಚಂಡೆವಾದಕರಾಗಿ, ಮುಮ್ಮೇಳದಲ್ಲಿ ಕೊಂಡದಕುಳಿ ರಾಮಚಂದ್ರ ಹೆಗಡೆ, ಈಶ್ವರ ನಾಯಕ್ ಮಂಕಿ, ಹೆನ್ನಾಬೈಲ್ ಸಂಜೀವಶೆಟ್ಟಿ, ಪ್ರಸನ್ನ ಶೆಟ್ಟಿಗಾರ ಮಂದಾರ್ತಿ, ಆದಿತ್ಯ ಹೆಗಡೆ, ಬೇಳಂಜೆ ಸತೀಶ್ ನಾಯಕ್ ಆಶೋಕ್ ಆಚಾರ್, ಯೋಗೀಂದ್ರ ಮರವಂತೆ ಮತ್ತು ಕೌಶಿಕ್ ಶಿರೂರು ಇವರು ಭಾಗವಹಿಸಿದ್ದರು.

## ಯಕ್ಷಸಾಹಿತ್ಯ ಪರಿಚಯ

ಯಕ್ಷಗಾನ ಪ್ರಸಂಗ ಕೃತಿಗಳ ಜೊತೆಗೆ ಸುಮಾರು ನೂರು ವರ್ಷಳಿಂದ ಹಲವು ಯಕ್ಷಸಾಹಿತ್ಯ ಕೃತಿಗಳು ಪ್ರಕಟವಾಗಿವೆ. ಹಲವು ಹಿರಿಯ ಕಲಾವಿದರ ಅಭಿನಂದನಾ ಗ್ರಂಥ, ಸಂಸ್ಮರಣಾ ಗ್ರಂಥ, ವಿಮರ್ಶೆ, ಸಂಶೋಧಾನಾ ಕೃತಿ, ಲೇಖನ ಸಂಗ್ರಹ ಇತ್ಯಾದಿ ವಿಭಾಗದಲ್ಲಿ ಸಾವಿರಾರು ಕೃತಿಗಳು ಪ್ರಕಟವಾಗಿವೆ. ಅವುಗಳ ಪರಿಚಯವನ್ನು ಈ ಅಂಕಣದಲ್ಲಿ ಮಾಡಿಕೊಡುತ್ತಿದ್ದೇವೆ. ಈ ಸಂಚಿಕೆಯಲ್ಲಿ ಕೆಲವು ಪ್ರಮುಖ ಹಿರಿಯ ಕಲಾವಿದರ ಅಭಿನಂದನಾ ಮತ್ತು ಸಂಸ್ಮರಣಾ ಕೃತಿಗಳ ವಿವರ ನೀಡುತ್ತಿದ್ದೇವೆ.

| ಕ್ರಮ ಸಂಖ್ಯೆ | ಕೃತಿಯ ಹೆಸರು | ಪ್ರಕಟಣಾ ವರ್ಷ | ಲೇಖಕರು/ಸಂಪಾದಕರು | ಪ್ರಕಾಶಕರು | ವಿಶೇಷತೆ |
|---|---|---|---|---|---|
| 1 | ಯಕ್ಷಗಾನ ಕಲಾ ತಪಸ್ವಿ | 1968 | ವಿದ್ವಾನ ಕಯ್ಯಾರ ಕಿಞಜಣ್ಣ ರೈ ಮತ್ತು ಕೃಷ್ಣ ಭಟ್ ಪೆರ್ಲ | ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ | ಹಿರಿಯ ಬಲಿಪ ನಾರಾಯಣ ಭಾಗವತರ ಸಂಸ್ಮರಣಾ ಗ್ರಂಥ |
| 2 | ರಸಋಷಿ | 1974 | ಸರವು ರಾಮ ಭಟ್ಟ | ದೇರಾಜೆ ಸೀತಾರಾಮಯ್ಯ ಸನ್ಮಾನ ಸಮಿತಿ ಬಾಳಿಲ ಸುಳ್ಯ | ದೇರಾಜೆ ಸೀತಾರಾಮಯ್ಯ ಅಭಿನಂದನಾ ಗ್ರಂಥ |
| 3 | ಯಕ್ಷಗಾನ ಮಕರಂದ | 1980 | ಮುಳಿಯ ಮಹಾಬಲ ಭಟ್ | ಪೊಳಲಿ ಶಾಸ್ತ್ರಿ ಸ್ಮಾರಕ ಸಮಿತಿ ಮಂಗಳೂರು | ಪೊಳಲಿ ಶಂಕರನಾರಾಯಣ ಶಾಸ್ತ್ರಿ(1897–1972) ಸಂಸ್ಮರಣ ಸಂಪುಟ |
| 4 | ಯಕ್ಷಗಾನ ಮತ್ತು ನಾನು | 1981 | ಶೇಣಿ ಗೋಪಾಲಕೃಷ್ಣ ಭಟ್ | ಶ್ರೀ ಶೇಣಿ ಸನ್ಮಾನ ಸಮಿತಿ, ಕನ್ನಡ ಸಂಘ ಸಂತ ಫಿಲೋಮಿನಾ ಕಾಲೇಜು ಪುತ್ತೂರು | ಶೇಣಿ ಗೋಪಾಲಕೃಷ್ಣ ಭಟ್ಟರ ಆತ್ಮಕಥನ |
| 5 | ಯಕ್ಷರಸ ಜೀವನ | 1981 | ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ | ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ ಸನ್ಮಾನ ಸಮಿತಿ ಪೆರಡಾಲ, ಕಾಸರಗೋಡು | ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ ಅವರ ಆತ್ಮಕಥನ |